ಕನ್ನಡಪ್ರಭ
ಮಂಗಳವಾರ 5.05.2026

ಗರಿಷ್ಠ 37°c | ಕನಿಷ್ಠ 23°c

ಸುದ್ದಿ ಸಿಂಚನ

ನಾಳೆ ಬಿಜೆಪಿ ಪ್ರತಿಭಟನೆ



ಹಿರೇಕೆರೂರು: ಕೃಷಿ ಇಲಾಖೆ ಹಾಗೂ ಕಂದಾಯ ಇಲಾಖೆಯ ಆಡಳಿತ ಕಾರ್ಯವೈಖರಿ ಖಂಡಿಸಿ ಹಿರೇಕೆರೂರು ಬಿಜೆಪಿ ವತಿಯಿಂದ ಮೇ 6ರಂದು ಬೆಳಗ್ಗೆ 10.30ಕ್ಕೆ ತಹಸೀಲ್ದಾರ್ ಕಚೇರಿಗೆ ಮುತ್ತಿಗೆ ಹಾಕಲಾಗುವುದು ಎಂದು ಮಾಜಿ ಸಚಿವ ಬಿ.ಸಿ. ಪಾಟೀಲ ಪ್ರಕಟಣೆಯಲ್ಲಿ ತಿಳಿಸಿದ್ದಾರೆ. 2025-26ನೇ ಸಾಲಿನ ಬೆಳೆವಿಮೆ ಜಮಾ ಆಗದೆ ಹಿರೇಕೆರೂರು ತಾಲೂಕಿನ 10 ಹಾಗೂ ರಟ್ಟಿಹಳ್ಳಿ ತಾಲೂಕಿನ 13 ಗ್ರಾಮಗಳು ಸೇರಿದಂತೆ ಒಟ್ಟು 23 ಗ್ರಾಮ ಪಂಚಾಯತಿಗಳ ರೈತರಿಗೆ ಅನ್ಯಾಯವಾಗಿದ್ದು, ಅಲ್ಲದೇ ಸರ್ವೆ ಮಾಡಿದ ಅಧಿಕಾರಿಗಳ ದಿವ್ಯ ನಿರ್ಲಕ್ಷ್ಯ ಕಾರಣವಾಗಿದೆ. ಆದ್ದರಿಂದ ಹಿರೇಕೆರೂರು-ರಟ್ಟಿಹಳ್ಳಿ ವಿಧಾನಸಭಾ ಕ್ಷೇತ್ರದ ಅನ್ಯಾಯಕ್ಕೊಳಗಾದ ರೈತಬಾಂಧವರು ಹಾಗೂ ಪಕ್ಷದ ಪದಾಧಿಕಾರಿಗಳು, ಮುಖಂಡರು, ಕಾರ್ಯಕರ್ತರು, ಅಭಿಮಾನಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕೆಂದು ವಿನಂತಿಸಿದ್ದಾರೆ.

ಗ್ರಾಮ ಒನ್ ಕೇಂದ್ರ ಸ್ಥಾಪನೆಗೆ ಅರ್ಜಿ ಆಹ್ವಾನ

ಹಾವೇರಿ: ಜಿಲ್ಲೆಯಲ್ಲಿ ಹೊಸದಾಗಿ ಗ್ರೇಡ್-1 ಗ್ರಾಮ ಪಂಚಾಯಿತಿಯಾಗಿ ಮಾರ್ಪಟ್ಟ ಹಲವು ಪಂಚಾಯಿತಿಗಳಲ್ಲಿ ಹೆಚ್ಚುವರಿಯಾಗಿ ಗ್ರಾಮ ಒನ್ ಕೇಂದ್ರ ಸ್ಥಾಪನೆಗೆ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ. ಹಾನಗಲ್ಲ ತಾಲೂಕು ಅರಳೇಶ್ವರ, ಆಡೂರ, ಹಾವೇರಿ ತಾಲೂಕು ಹಾಂವಶಿ, ಹಾಲಗಿ, ರಾಣಿಬೆನ್ನೂರ ತಾಲೂಕು ಕಜ್ಜರಿ, ಸೋಮಲಾಪೂರ, ಮುದೇನೂರ, ಹಿರೇಕೆರೂರು ತಾಲೂಕು ಮಡ್ಲೂರು ಹಾಗೂ ಶಿಗ್ಗಾಂವಿ ತಾಲೂಕು ಹನಮನಹಳ್ಳಿ ಮತ್ತು ಬಾಡ ಗ್ರಾಮ ಪಂಚಾಯಿತಿಗಳಲ್ಲಿ ಗ್ರಾಮ ಒನ್ ಕೇಂದ್ರ ಸ್ಥಾಪನೆಗೆ ಅರ್ಜಿ ಆಹ್ವಾನಿಸಲಾಗಿದೆ.

ಆಸಕ್ತ ಅಭ್ಯರ್ಥಿಗಳು ಆನ್‌ಲೈನ್‌ನಲ್ಲಿ ಮೇ 15ರೊಳಗಾಗಿ ಅರ್ಜಿ ಸಲ್ಲಿಸಬೇಕು ಎಂದು ಅಪರ ಜಿಲ್ಲಾಧಿಕಾರಿಗಳು ತಿಳಿಸಿದ್ದಾರೆ. ರಾಜ್ಯ ಸರ್ಕಾರದ ವಿವಿಧ ಇಲಾಖೆಗಳ ಸೇವೆಗಳು ಒಂದೇ ಸೂರಿನಡಿ ಒದಗಿಸಲು ಗ್ರಾಮ ಪಂಚಾಯತಿ ಮಟ್ಟದಲ್ಲಿ ಗ್ರಾಮ ಒನ್ ಕೇಂದ್ರಗಳನ್ನು ಸ್ಥಾಪಿಸಲಾಗಿದೆ. ಈ ಮೂಲಕ ಗ್ರಾಮೀಣ ಭಾಗದ ಜನರಿಗೆ ತಮ್ಮ ಸಮೀಪದಲ್ಲಿ ಸರ್ಕಾರದ ಹಲವು ಸೇವೆಗಳು ತಮ್ಮ ಮನೆಯ ಬಾಗಿಲಿಗೆ ತಲುಪುತ್ತಿವೆ. ಈ ನಿಟ್ಟಿನಲ್ಲಿ ರಾಜ್ಯ ಸರ್ಕಾರದ ನೂತನ ಯೋಜನೆಗಳನ್ನು ಸೇವಾ ಸಿಂಧು ಪೋರ್ಟಲ್ ಮೂಲಕ ಅನುಷ್ಠಾನಗೊಳಿಸಲಾಗುತ್ತಿದೆ ಎಂದು ತಿಳಿಸಿದ್ದಾರೆ.

ಪುರುಷ ಕಾಣೆ

ಹಾವೇರಿ: ಸ್ಥಳೀಯ ಶಿವಲಿಂಗನಗರದ ನಿವಾಸಿ ದಾದಾಖಲಂದರ ಬಾಬುಸಾಬ ಹುಬ್ಬುಸಾಬನವರ (38) ಎಂಬಾತ ಏ. 29ರಂದು ಹೆಂಡತಿಯೊಂದಿಗೆ ಜಗಳ ಮಾಡಿಕೊಂಡು ಮನೆಯಿಂದ ಹೋದವನು ಮರಳಿ ಬಾರದೆ ಕಾಣೆಯಾಗಿರುವುದಾಗಿ ಹಾವೇರಿ ಶಹರ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಲಾಗಿದೆ.

ಕಾಣೆಯಾದ ವ್ಯಕ್ತಿ 5.8 ಅಡಿ ಎತ್ತರ, ಸಾಧಾರಣ ಮೈಕಟ್ಟು, ದುಂಡು ಮುಖ, ಕಪ್ಪು ಬಣ್ಣದ ಪ್ಯಾಂಟ್ ಧರಿಸಿದ್ದಾನೆ. ಮಾಹಿತಿ ಲಭ್ಯವಾದಲ್ಲಿ ಹಾವೇರಿ ಶಹರ ಠಾಣೆ ದೂ.ಸಂಖ್ಯೆ 08375-232333, ಮೊ.9480804545, ಕಂಟ್ರೋಲ್ ರೂಂ.08375-237368 ಹಾಗೂ ಅಧೀಕ್ಷಕರ ಕಚೇರಿ ದೂ.08375-232800 ಸಂಪರ್ಕಿಸಲು ಹಾವೇರಿ ಶಹರ ಪೊಲೀಸ್ ಠಾಣೆ ಠಾಣಾಧಿಕಾರಿಗಳು ತಿಳಿಸಿದ್ದಾರೆ.

ಪೇಟೆ ಧಾರಣೆ

ರಾಣಿಬೆನ್ನೂರು

ಉತ್ಪನ್ನಗಳು	ಕನಿಷ್ಠ	ಗರಿಷ್ಠ
ಹತ್ತಿ	7990	8470
ಶೇಂಗಾ	3739	7290
ಮೆಕ್ಕೆಜೋಳ	1955	1961



ರಾಣೆಬೆನ್ನೂರು ತಾಲೂಕಿನ ಕುಮಾರಪಟ್ಟಣಕ್ಕೆ ಸಮೀಪದ ಕೊಡಿಯಾಲ ಹೊಸಪೇಟೆ ಗ್ರಾಮದ ಮೂಲ ದುರ್ಗಾದೇವಿ ದೇವಸ್ಥಾನ ಮತ್ತು ನಾಗದೇವರ ಸಪ್ತಮ ವರ್ಧಂತಿ ಮಹೋತ್ಸವದ ಅಂಗವಾಗಿ ಹಂದರಗಂಭ ಪೂಜೆ ನೆರವೇರಿಸಲಾಯಿತು.

ವರ್ಧಂತಿ ಮಹೋತ್ಸವ ಆಚರಣೆಗೆ ಹಂದರಗಂಭ ಪೂಜೆ

• **ಕನ್ನಡಪ್ರಭ ವಾರ್ತೆ ಕುಮಾರಪಟ್ಟಣ**

ಇಲ್ಲಿಗೆ ಸಮೀಪದ ಕೊಡಿಯಾಲ ಹೊಸಪೇಟೆ ಗ್ರಾಮದ ಹತ್ತಿರ ತುಂಗಭದ್ರಾ ನದಿ ದಡದಲ್ಲಿರುವ ಮೂಲ ದುರ್ಗಾದೇವಿ ದೇವಸ್ಥಾನ ಮತ್ತು ನಾಗದೇವರಸಪ್ತಮ ವರ್ಧಂತಿ ಮಹೋತ್ಸವ ಆಚರಣೆಗೆ ಸದ್ಗುರು ಅಪ್ಪಾಜೀಯವರ ಸಾನಿಧ್ಯದಲ್ಲಿ ಹಂದರಗಂಭ ಪೂಜೆ ನೆರವೇರಿಸಲಾಯಿತು,

ಸದ್ಗುರು ಅಪ್ಪಾಜೀಯವರು ಮಾತನಾಡಿ, ಮೇ 11ರ ಬೆಳಗ್ಗೆ ದೇವಸ್ಥಾನದ ಆವರಣದಲ್ಲಿ ಭಕ್ತರಿಂದ ತುಲಾಭಾರಸೇವೆನಡೆಯಲಿದೆ. ದುರ್ಗಾದೇವಿಯ ಜಾತ್ರಾ ಮಹೋತ್ಸವದ ನಿಮಿತ್ತ ಆನೆ ಅಂಬಾರಿ ಸಮೇತ ಕೊಡಿಯಾಲ ಗ್ರಾಮದ ದುಂಡಿ ಬಸವೇಶ್ವರ ದೇವಸ್ಥಾನದಿಂದ ರಾಜ್ಯದ ವಿವಿಧ ಕಲಾ ತಂಡದೊಂದಿಗೆ ಕುಂಭ ಮೇಳ ಜರುಗಲಿದೆ. ಮೇ 12ರ ಬೆಳಗ್ಗೆ 8 ಗಂಟೆಗೆ,ಕ್ಷೇತ್ರಪಾಲಕ ನೂತನ ಅಷ್ಟದಳ ಪದ್ಮ ಪೀಠ ಪ್ರತಿಷ್ಠಾ ಕಾರ್ಯ ಸೇರಿದಂತೆ ಆದ್ಯಗಣಯಾಗ, ನಿರ್ವಿಘ್ನಯಾಗ, ಪಂಚವಿಶತಿ ಕಳಶಾರಾಧನೆ ಪ್ರಧಾನಯಾಗ ಕುಂಭಾಭಿಷೇಕ ಹಾಗೂ ಶ್ರೀ ಕಾಳಿ ಸಹಸ್ರನಾಮ ಕದಳಿಯಾಗ ಜರುಗಲಿದ್ದು, ಅದೇ ದಿನಸಂಜೆನಾಗತನುತರ್ಪಣ ಸೇವೆ, ಆಶ್ಲೇಷ ಬಲಿ ಪ್ರಸನ್ನ ಪೂಜೆ ನಡೆಯಲ್ಲಿದ್ದು, ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ದೇವಿ ಕೃಪೆಗೆ ಪಾತ್ರರಾಗಬೇಕಾಗಿ ತಿಳಿಸಿದರು.

ದೇವಸ್ಥಾನ ಸಮಿತಿಯ ಟ್ರಸ್ಟಿ ನಾಗರಾಜ್ ಕುರವತ್ತಿ ಮಾತನಾಡಿ, ಜಾತ್ರಾ ಕಾರ್ಯಕ್ರಮದಲ್ಲಿ ಕುಂಭ ಹೊರಲು ಬಯಸುವ ತಾಯಂದಿರು ದೇವಸ್ಥಾನ ಸಮಿತಿಯವರನ್ನು ಸಂಪರ್ಕಿಸಲು ಕೋರಿದರು.

ಈ ಸಂದರ್ಭದಲ್ಲಿ ಪಾರ್ವತಮ್ಮಕರಡೆಪ್ಪನವರ್, ಟ್ರಸ್ಟಿನ್ಯಾಯವಾದಿ ವೀರೇಶ್ ಅಜ್ಜಣ್ಣನವರ, ಪ್ರಕಾಶ್ ಕರಡೆಪ್ಪನವರ್, ಈರಣ್ಣ ಹೊನ್ನಪ್ಪನವರ್, ಷಣ್ಮುಖ ಪೂಜಾರ್, ಕಂಚಿಕೇರಿ ಕರಿಬಸಣ್ಣ, ಗಂಗಾಧರ ಕಮಲಾಪುರ, ಕಾರ್ತೀಕ್, ಗುರು ಬಸವರಾಜ ಸೇರಿದಂತೆ ಇತರರಿದ್ದರು.



ಪ್ರಾಜೆಕ್ಟ್ ಎಕ್ಸಿಬಿಷನ್

ರಾಣಿಬೆನ್ನೂರು: ವಿದ್ಯಾರ್ಥಿಗಳು ಜ್ಞಾನವೃದ್ಧಿಗಾಗಿ ಸಮಾಜಕ್ಕೆ ಉಪಯುಕ್ತವಾಗುವಂತಹ ಪ್ರಾಜೆಕ್ಟ್‌ಗಳನ್ನು ಸಿದ್ಧಗೊಳಿಸಬೇಕು ಎಂದು ಪ್ರಾ. ಡಾ.ಎಸ್.ಜಿ. ಮಾಕನೂರ ಹೇಳಿದರು. ನಗರದ ಶ್ರೀ ತರಳಬಾಳು ಜಗದ್ಗುರು ತಾಂತ್ರಿಕ ಮಹಾವಿದ್ಯಾಲಯದ ಅಂತಿಮ ವರ್ಷದ ವಿದ್ಯಾರ್ಥಿಗಳು ಸಿದ್ಧಗೊಳಿಸಿದ್ದ ಪ್ರಾಜೆಕ್ಟ್ ಎಕ್ಸಿಬಿಷನ್ ಉದ್ಘಾಟಿಸಿ ಅವರು ಮಾತನಾಡಿದರು. ವಿದ್ಯಾರ್ಥಿಗಳು ತಮ್ಮ ಪ್ರಾಜೆಕ್ಟ್ ಪ್ರದರ್ಶಿಸುವ ಮುಖಾಂತರ ಶೈಕ್ಷಣಿಕ ಜ್ಞಾನ ಮತ್ತು ಉದ್ಯಮ ಕೌಶಲಗಳ ನಡುವಿನ ಅಂತರ ಕಡಿಮೆ ಮಾಡುವ ಮಹತ್ವದ ಚಿಂತನೆಯಾಗಿರುತ್ತದೆ ಎಂದರು. ಪ್ರಾಜೆಕ್ಟ್ ಎಕ್ಸಿಬಿಷನ್ ಸಂಚಾಲಕ ಡಾ. ಜೆ. ಓ. ಕಿರಣ, ಡಾ.ಎಸ್. ಎಫ್. ಕೊಡದ, ಪ್ರೊ.ಸಿ.ಎಂ. ಪರಮೇಶ್ವರಪ್ಪ, ಡಾ.ಬಿ.ಮಹೇಶ್ವರಪ್ಪ, ಡಾ. ಸವಿತಾ ಚನ್ನಗೌಡರ, ಡಾ. ಮುಜಿಬುಲ್ಲಖಾನ್ ಗುತ್ತಲ, ಪ್ರೊ. ದಿನೇಶ ಮಾಗನೂರ ಉಪಸ್ಥಿತರಿದ್ದರು.

ಸಿಎನ್‌ಜಿ ಬಂಕ್ ನಿರ್ಮಾಣಕ್ಕೆ ಆಟೋ ಚಾಲಕರಿಂದ ಪ್ರತಿಭಟನೆ

ಬ್ಯಾಡಗಿ ತಹಸೀಲ್ದಾರ್‌ಗೆ ಮನವಿ ಸಲ್ಲಿಕೆ | ಕೇಂದ್ರ, ರಾಜ್ಯ ಸರ್ಕಾರದ ವಿರುದ್ಧ ಆಕ್ರೋಶ

• **ಕನ್ನಡಪ್ರಭ ವಾರ್ತೆ** ಬ್ಯಾಡಗಿ

ಪಟ್ಟಣದಲ್ಲಿ ಸಿಎನ್‌ಜಿ ಹಾಗೂ ಎಲ್‌ಪಿಜಿ ಬಂಕ್‌ಗಳನ್ನು ನಿರ್ಮಾಣ ಮಾಡುವಂತೆ ಆಗ್ರಹಿಸಿ ಪಟ್ಟದಲ್ಲಿನ ಆಟೋ ಚಾಲಕರು ಹಾಗೂ ಮಾಲೀಕರ ಸಂಘದ ವತಿಯಿಂದ ಸೋಮವಾರ ಬೃಹತ್ ಪ್ರತಿಭಟನೆ ನಡೆಸಿ, ನಂತರ ತಹಸೀಲ್ದಾರ್‌ಗೆ ಮನವಿ ಸಲ್ಲಿಸಿ ತಮ್ಮ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿದರು.

ಪಟ್ಟಣದ ಗುಮ್ಮನಹಳ್ಳಿ ರಸ್ತೆಯಿಂದ ಆರಂಭವಾದ ಪ್ರತಿಭಟನೆ ಪಟ್ಟಣದ ಹಳೆ ಪುರಸಭೆ, ಮುಖ್ಯರಸ್ತೆ, ಸುಭಾಷ ಸರ್ಕಲ್ ಮೂಲಕ ತಹಸೀಲ್ದಾರ್‌ಕಚೇರಿ ತಲುಪಿತು. ಈ ವೇಳೆ ಸುಭಾಷ ಸರ್ಕಲ್‌ನಲ್ಲಿ ಮಾನವ ಸರಪಳಿ ನಿರ್ಮಿಸಿ ರಸ್ತೆ ತಡೆ ನಡೆಸಿ ಪ್ರತಿಭಟನೆ ನಡೆಸಲಾಯಿತು. ಈ ವೇಳೆ ಸಮರ್ಪಕವಾಗಿ ಆಟೋಗಳಿಗೆ ಗ್ಯಾಸ್ ದೊರೆಯದಿರುವ ಬಗ್ಗೆ ಚಾಲಕರು ಕೇಂದ್ರ ಹಾಗೂ ರಾಜ್ಯ ಸರಕಾರಗಳ ವಿರುದ್ಧ ಆಕ್ರೋಶ ಹೊರಹಾಕಿದರು.

ಮನವಿ ಸಲ್ಲಿಸಿ ಮಾತನಾಡಿದ ಆಟೊ ಚಾಲಕರ ಸಂಘದ ಅಧ್ಯಕ್ಷ ರಾಜು ಬಸಾಪುರ ''ಪಟ್ಟಣ ಸೇರಿದಂತೆ ತಾಲೂ ಕಿನಲ್ಲಿ ಸುಮಾರು 1800ಕ್ಕೂ ಹೆಚ್ಚು ಆಟೋಗಳು ಸಂಚರಿಸುತ್ತಿದ್ದು ಇವೆಲ್ಲವು ಸಿವಿಲ್‌ಜಿ ಹಾಗೂ ಎಲ್‌ಪಿಜಿ (ಗ್ಯಾಸ್) ಅವಲಂಬಿಸಿವೆ. ಆದರೆ ಪಟ್ಟಣದಲ್ಲಿ ಎರಡು ಬಂಕ್ ಇಲ್ಲದ ಕಾರಣ ಗ್ಯಾಸ್ ತುಂಬಿಸಲು ಮೋಟೆಬೆನ್ನೂರ, ಹಾವೇರಿ ಮತ್ತು ರಾಣಿಬೆನ್ನೂರ ಹಾಗೂ ಹೂಲಿಹಳ್ಳಿಗೆ ತೆರಳಬೇಕಾದ ಅನಿವಾರ್ಯತೆ ಇದೆ. ಇದರಿಂದ ದುಡಿಮೆಯ ಅರ್ಧ ಮೊತ್ತವನ್ನ ಓಡಾಡಲು ಖರ್ಚು ಮಾಡುವ ಅನಿವಾರ್ಯತೆ ಎದುರಾಗಿದೆ. ಇದಲ್ಲದೇ ಅಲ್ಲಿಯೂ ಸಮರ್ಪಕವಾದ ಸರಬರಾಜು ಇಲ್ಲದೇ ನಾವು ಪರದಾಡುತ್ತಿದ್ದು ಕೂಡಲೇ ನಮ್ಮ ಬೇಡಿಕೆಗೆ ಸ್ಪಂದಿಸಿ ಎಲ್‌ಪಿಜಿ ಹಾಗೂ ಸಿಎನ್‌ಜಿ ಬಂಕ್'' ಬ್ಯಾಡಗಿಯಲ್ಲಿ ತೆರೆಯಲು ಅನುಮತಿ ನೀಡುವಂತೆ ಆಗ್ರಹಿಸಿದರು.

ಬದುಕು ಬೀದಿಗೆ: ಉಪಾಧ್ಯಕ್ಷ ಈರಣ್ಣ ಶಿಡೆನೂರ ಮಾತನಾಡಿ, ''ರಾಜ್ಯ ಹಾಗೂ ದೇಶದಲ್ಲಿ ಅಗತ್ಯ ವಸ್ತುಗಳ ಬೆಲೆ ಗಗನಕ್ಕೇರಿದೆ. ಇದರೊಟ್ಟಿಗೆ ಎಲ್‌ಪಿಜಿ ಹಾಗೂ ಸಿಎನ್‌ಜಿ ದರ ಸಹ ಹೆಚ್ಚಾಗಿದೆ. ನಾವುಗಳು ಮಾತ್ರ ಹಳೆಯ ಬಾಡಿಗೆ ಪಡೆಯುತ್ತಿದ್ದೇವೆ. ದರ ಹೆಚ್ಚಳ ಮಾಡಿದರೆ ನಮಗೆ ಅಂದು ಉಪವಾಸವೇ ಗತಿ, ಒಂದು ವೇಳೆ ಬ್ಯಾಡಗಿ ಪಟ್ಟಣದಲ್ಲಿಯೇ ಎರಡು ಬಂಕ್ ನಿರ್ಮಾಣವಾದಲ್ಲಿ ಅನುಕೂಲವಾಗಲಿದೆ'' ಎಂದರು.

ಕಾರ್ಯದರ್ಶಿ ಗಣೇಶ ವಡ್ಡರ ಮಾತನಾಡಿ, ''ಪಟ್ಟಣದಲ್ಲಿ ಎಲ್.ಪಿ.ಜಿ ಹಾಗೂ ಸಿಎನ್‌ಜಿ ಬಂಕ್ ಇಲ್ಲದೇ ಇರುವ ಕಾರಣ ನಾವು ಅದನ್ನು ಅರಸಿ ದೂರ ಹೋಗಲೇಬೇಕಾದ ಅನಿವಾರ್ಯತೆ ಇದೆ. ಆದರೆ 12 ಕಿಲೋಮೀಟರ್ ಮೇಲೆ ನಾವು ಆಟೋ ಓಡಿಸಿದಲ್ಲಿ ಪೊಲೀಸರು ದಂಡ ಹಾಕುತ್ತಿದ್ದು, ಇದು ಆಟೋ ಚಾಲಕರಿಗೆ ಮತ್ತಷ್ಟು ಹೊರೆಯಾಗುತ್ತಿದೆ. ಇದರಿಂದ ಪ್ರತಿ ತಿಂಗಳು ಇಎಂಐ ಸಾಲವನ್ನು ತೀರಿಸಲು ಕಷ್ಟವಾಗುತ್ತಿದೆ. ಆದ್ದರಿಂದನಮ್ಮ ಅಳಲನ್ನಗಂಭೀರವಾಗಿ ಪರಿಗಣಿಸುವಂತೆ ಆಗ್ರಹಿಸಿದರು.

ಪ್ರಕಾಶ ಬೇನಾಳ ಮಾತನಾಡಿ, ''ಸಿವಿಲ್‌ಜಿ ದರ ಕಳೆದ ಒಂದು ವರ್ಷಗಳಲ್ಲಿ 15ರಿಂದ 20ರು.ವರೆಗೆ ಏರಿಕೆಯಾಗಿದೆ. ದಿನಕ್ಕೆ ಎರಡರಿಂದ ಮೂರು ಬಾಡಿಗೆ ಸಿಗುವಂತಹ ಸಮಯದಲ್ಲಿ ಇದರಿಂದ ಆರ್ಥಿಕ ಹೊರೆ ಹೆಚ್ಚಾಗುತ್ತಿದ್ದು, ನಾವುಗಳು ಕುಟುಂಬ ನಡೆಸಲು ಪರದಾಡುವಂತಾಗಿದೆ ಎಂದರು.

ಈ ಸಂದರ್ಭದಲ್ಲಿ ಬಾಗಲಕೋಟಿ, ರಾಜು ಬೊಮ್ಮನಾಳ, ಈರಣ್ಣಶಿಡೆನೂರ, ರಾಜು ಬಾಳಿಕಾಯಿ, ಸುರೇಶ ಬಿರಾದರ, ಪ್ರಕಾಶ ಬೇನಾಳ, ಸುರೇಶ ಚಲವಾದಿ, ಮಾರುತಿ ಒಳಗುಂದಿ, ರಾಜಕುಮಾರ ಯಾದವಾಡ, ನಾಗರಾ ಮಲ್ಲೂರ, ನಾಗರಾಜ ಕಲ್ಯಾಣಿ ಕೃಷ್ಣಾ ಧೂಳಿಕೊಪ್ಪ, ಚಂದ್ರು ಗದಗಕರ, ಗೌಸುಸಾಬ, ಶಿವಶಂಕರ, ರಾಜು, ಕು ಬೇರ ಆಡಿನವರ, ಪ್ರಕಾಶ ಶಿಲ್ಪಿ ಸೇರಿದಂತೆ ನೂರಾಟು ಆಟೋ ಚಾಲಕರು ಭಾಗವಹಿಸಿದ್ದರು.



ಬ್ಯಾಡಗಿ ಪಟ್ಟಣದಲ್ಲಿ ಸಿಎನ್‌ಜಿ ಹಾಗೂ ಎಲ್ಪಿಜಿ ಬಂಕ್‌ಗಳನ್ನು ನಿರ್ಮಾಣ ಮಾಡುವಂತೆ ಆಗ್ರಹಿಸಿ, ಪಟ್ಟಣದ ಆಟೋ ಚಾಲಕರು ಹಾಗೂ ಮಾಸೀಕರ ಸಂಘದ ವತಿಯಿಂದ ಸೋಮವಾರ ಬೃಹತ್ ಪ್ರತಿಭಟನೆ ನಡೆಯಿತು. ನಂತರ ತಹಸೀಲ್ದಾರ್‌ಗೆ ಮನವಿ ಸಲ್ಲಿಸಿ ತಮ್ಮ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿದರು.

> **ಆಟೋ ಚಾಲಕರ ಸಂಕಷ್ಟ ನೋಡಲು ಆಗುತ್ತಿಲ್ಲ. ನನ್ನ ಬಳಿಯು ಆಟೋಗಳಿದ್ದು ಯಾರಾದರೂ ಪಟ್ಟಣದಲ್ಲಿ ಎಲ್‌ಪಿಜಿ ಹಾಗೂ ಸಿಎನ್‌ಜಿ ಬಂಕ್ ನಿರ್ಮಾಣ ಮಾಡಲು ನಾನು ನನ್ನ ಭೂಮಿ ನೀಡಲು ಸಿದ್ಧನಿದ್ದೇನೆ.**
> **• ಮಹಾಂತೇಶ ಹಾವೇರಿ**

ಸಾರ್ವಜನಿಕರಿಂದ ಅಭಿಪ್ರಾಯ ಸಂಗ್ರಹಿಸಿದ ಶಾಸಕ ಕೋಳಿವಾಡ

ನಗರಸಭಾ ಕ್ರೀಡಾಂಗಣ ಜಾಗದಲ್ಲಿ ಬಸ್ ನಿಲ್ದಾಣ ನಿರ್ಮಾಣಕ್ಕೆ ಹೆಚ್ಚಿನ ಒಲವು

• **ಕನ್ನಡಪ್ರಭ ವಾರ್ತೆ** ರಾಣಿಬೆನ್ನೂರು

ಈಗಿರುವ ಕ್ರೀಡಾಂಗಣದಲ್ಲಿ ಬಸ್ ನಿಲ್ದಾಣ ಮಾಡುವುದು ಸೂಕ್ತವಾದರೂ ಅದಕ್ಕಿಂತ ಮೊದಲು ಹೊಸ ಜಾಗೆಯಲ್ಲಿ ಸುಸಜ್ಜಿತವಾದ ಕ್ರೀಡಾಂಗಣ ನಿರ್ಮಿಸಬೇಕು. ನಗರದ ಮುಸಲ್ಮಾನ ಸಮಾಜದ ಖಬರಸ್ಥಾನ ಎದುರಿಗಿರುವ ಜಾಗೆ ಕುರಿತು ಚಿಂತನೆ ಮಾಡಬೇಕು. ಈಗಿರುವ ಕೆಇಬಿ ಗ್ರೀಡ್ ಜಾಗೆಯನ್ನು ಪರಿಶೀಲಿಸಬಹುದು. ನಗರದ ಹೊರವಲಯದಲ್ಲಿ ಯಾವುದಾದರೂ ಸೂಕ್ತ ಜಾಗೆಯಲ್ಲಿ ನಿರ್ಮಿಸುವುದು ಉತ್ತಮ. ಇವು ನಗರದ ನಗರಸಭೆ ಗುಡ್ಡದ ಸ್ಮಾರಕ ಭವನದಲ್ಲಿ ಸೋಮವಾರ ನೂತನ ಬಸ್ ನಿಲ್ದಾಣ ಸ್ಥಳ ಗುರುತಿಸುವಿಕೆ ಕುರಿತು ಕರೆಯಲಾಗಿದ್ದ ಜನಾಭಿಪ್ರಾಯ ಸಂಗ್ರಹ ಸಭೆಯಲ್ಲಿ ಸಾರ್ವಜನಿಕರಿಂದ ವ್ಯಕ್ತವಾದ ಪ್ರಮುಖ ಅಂಶಗಳು.

ಸಭೆಯ ಪ್ರಾರಂಭದಲ್ಲಿ ಶಾಸಕ ಪ್ರಕಾಶ ಕೋಳಿವಾಡ ಮಾತನಾಡಿ, ರಾಣಿಬೆನ್ನೂರು ವೇಗವಾಗಿ ಬೆಳೆಯುತ್ತಿರುವ ವಾಣಿಜ್ಯ ನಗರಿಯಾಗಿದ್ದು ಇಲ್ಲಿ ಒಂದು ಹೈಟೆಕ್ ಬಸ್ ನಿಲ್ದಾಣದ ಅವಶ್ಯಕತೆಯಿದೆ. ಒಂದು ವರ್ಷದ ಹಿಂದೆ ಬಸ್ ನಿಲ್ದಾಣ ಸ್ಥಳಾಂತರ ಮಾಡಲು ನಿರ್ಣಯಿಸಲಾಗಿತ್ತು. ಬಸ್ ನಿಲ್ದಾಣ ಹಾಗೂ ಕ್ರೀಡಾಂಗಣ ನಿರ್ಮಾಣಕ್ಕೆ ಜಾಗೆ ಪರಿಶೀಲಿಸಲು ಕೆಎಸ್‌ಆರ್‌ಟಿಸಿ ಹಾಗೂ ಒಲಂಪಿಕ್ ಅಸೋಸಿಯೇಶನ್ ಅಧಿಕಾರಿಗಳು ನಗರಕ್ಕೆ ಭೇಟಿ ನೀಡಿದ್ದರು. ಆಗ ಈಗಿರುವ ಕ್ರೀಡಾಂಗಣವನ್ನು ನಗರದ ಹೊರವಲಯಕ್ಕೆ ಸ್ಥಳಾಂತರಿಸಿ ಆ ಜಾಗೆಯಲ್ಲಿ ಬಸ್ ನಿಲ್ದಾಣ ನಿರ್ಮಿಸುವುದು ಸೂಕ್ತ ಎಂಬ ಸಲಹೆಯನ್ನು ಅಧಿಕಾರಿಗಳು ನೀಡಿದರು. ಈ ಹಿನ್ನೆಲೆಯಲ್ಲಿ ನಗರದ ವಿವಿಧ ಸಂಘ, ಸಂಸ್ಥೆಗಳು, ಸಾರ್ವಜನಿಕರ ಅಭಿಪ್ರಾಯ ಸಂಗ್ರಹಿಸಲು ಸಭೆ ಕರೆಯಲಾಗಿದೆ. ಈಗಿರುವ ಕ್ರೀಡಾಂಗಣದಲ್ಲಿ ಒಳಾಂಗಣ ಮತ್ತು ಹೊರಾಂಗಣ ನಿರ್ಮಿಸಲು ಜಾಗೆ ಸಾಲುವುದಿಲ್ಲ. ಇದು ಬಸ್ ನಿಲ್ದಾಣಕ್ಕೆ ಅನುಕೂಲವಾಗಲಿದೆ. ಆದ್ದರಿಂದ ಸಾರ್ವಜನಿಕರು ಇದರ ಬಗ್ಗೆ ಮುಕ್ತವಾಗಿ ತಮ್ಮ ಅಭಿಪ್ರಾಯ ತಿಳಿಸುವಂತೆ ಕೋರಿದರು.

ಕೆಎಲ್‌ಇ ಸ್ಥಾನಿಕ ಆಡಳಿತ ಮಂಡಳಿ ಕಾರ್ಯಾಧ್ಯಕ್ಷ ವಿ.ಪಿ.ಲಿಂಗನಗೌಡ್ರ ಮಾತನಾಡಿ, ನಗರಸಭಾ ಕ್ರೀಡಾಂಗಣವು ನಗರದ ಮಧ್ಯವರ್ತಿ ಸ್ಥಳದಲ್ಲಿದ್ದು ಈ ಜಾಗೆಯಲ್ಲಿ ಬಸ್ ನಿಲ್ದಾಣ ಮಾಡುವುದು ಒಳ್ಳೆಯದು. ಇದರ ಜೊತೆಗೆ ಸುಸಜ್ಜಿತವಾದ ಕ್ರೀಡಾಂಗಣ ಮಾಡಿಕೊಡಬೇಕು ಎಂದರು.

ರೈತ ಮುಖಂಡ ರವೀಂದ್ರಗೌಡ ಪಾಟೀಲ ಮಾತನಾಡಿ, ನಿಯೋಜಿತ ಬಸ್ ನಿಲ್ದಾಣ ಜಾಗೆಯು ಮಿನಿವಿಧಾನಸೌಧ, ನೆಹರು ಮಾರುಕಟ್ಟೆ, ರಾಷ್ಟ್ರೀಯ ಹೆದ್ದಾರಿ, ಕೋರ್ಟ್, ರೈಲ್ವೆ ಸ್ಟೇಷನ್, ನಗರಸಭೆಗೆ ಹತ್ತಿರವಿದೆ. ಹೀಗಾಗಿ ಕ್ರೀಡಾಂಗಣದ ಜಾಗೆಯಲ್ಲಿ ಬಸ್ ನಿಲ್ದಾಣ ಮಾಡುವುದು ಸೂಕ್ತ ಎಂದರು.

ನಾಗರಿಕ ಹಿತರಕ್ಷಣಾ ವೇದಿಕೆ ಅಧ್ಯಕ್ಷ ಡಾ.ಎಸ್.ಎಲ್. ಪವಾರ ಮಾತನಾಡಿ, ಬ್ರಿಟಿಷರ ಕಾಲದಿಂದಲೂ ಈಗಿರುವ ಕ್ರೀಡಾಂಗಣದ ಜಾಗೆಯನ್ನು ಕ್ರೀಡಾ ಉದ್ದೇಶಕ್ಕೆ ಮಾತ್ರ ಬಳಸುವಂತೆ ಸೂಚಿಸಲಾಗಿದೆ. ಉದಯೋನ್ಮುಖ ಕ್ರೀಡಾಪಟುಗಳಿಗೆ ಅನುಕೂಲವಾಗಲಿ ಎಂಬ ಉದ್ದೇಶದಿಂದ ಈ ಕ್ರೀಡಾಂಗಣ ನಿರ್ಮಿಸಲಾಗಿದೆ. ಮೇಲಾಗಿ ಇದಕ್ಕೆ ಹೊಂದಿಕೊಂಡಂತೆ ನಗರಸಭಾ ಪ್ರೌಢಶಾಲೆಯಿದ್ದು ಅದನ್ನು ಹಾಗೂ ಕ್ರೀಡಾಂಗಣವನ್ನು ಬಸ್ ನಿಲ್ದಾಣಕ್ಕಾಗಿ ಅದನ್ನು ಸ್ಥಳಾಂತರಿಸುವುದು ಸರಿಯಲ್ಲ. ನಗರದ ಹೊರವಲಯದ ಯಾವುದಾದರೂ ಸೂಕ್ತ ಜಾಗೆಯಲ್ಲಿ ಬಸ್ ನಿಲ್ದಾಣ ನಿರ್ಮಿಸಲು ಕ್ರಮ ಕೈಗೊಳ್ಳಬೇಕು ಎಂದರು.

ನಗರಸಭಾ ಪ್ರೌಢಶಾಲೆಯ ನಿವೃತ್ತ ಸಿಬ್ಬಂದಿ ಈಶ್ವರ ಹಾವನೂರ ಮಾತನಾಡಿ, ಬಸ್ ನಿಲ್ದಾಣ ನಿರ್ಮಿಸಲು ಕ್ರೀಡಾಂಗಣ ಸ್ಥಳಾಂತರ ಮಾಡಬಾರದು. ಬೇಕಾದರೆ ನಗರದ ಮಧ್ಯವರ್ತಿ ಸ್ಥಳದಲ್ಲಿಯೇ ಇರುವ ಮುಸಲ್ಮಾನ ಸಮಾಜದ ಖಬರಸ್ಥಾನ ಎದುರಿಗಿರುವ ಜಾಗೆ ಕುರಿತು ಚಿಂತನೆ ಮಾಡಬೇಕು ಎಂದರು.

ಜೆಡಿಎಸ್ ಜಿಲ್ಲಾಧ್ಯಕ್ಷ ಮಂಜುನಾಥ ಗೌಡಶಿವಣ್ಣನವರ ಮಾತನಾಡಿ, ನಗಸರಭೆ ಕ್ರೀಡಾಂಗಣ ವಿದ್ಯಾರ್ಥಿಗಳು ಹಾಗೂ ಕ್ರೀಡಾಪಟುಗಳಿಗೆ ಬೇಕು. ನಗರದ ಹಲಗೇರಿ ರಸ್ತೆಯಲ್ಲಿರುವ ಕೆಇಬಿ ಗ್ರೀಡ್ ಜಾಗೆಯಲ್ಲಿ ಬಸ್ ನಿಲ್ದಾಣ ನಿರ್ಮಿಸಬೇಕು. ಮೊದಲು ಕ್ರೀಡಾಂಗಣ ಉದ್ಘಾಟನೆ ಮಾಡಿ ನಂತರ ಬಸ್ ನಿಲ್ದಾಣ ಮಾಡೋಣ ಎಂದರು.

ರಾಣಿಬೆನ್ನೂರು ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ವೀರೇಶ ಮೋಟಗಿ, ಹಾವೇಮುಲ ಅಧ್ಯಕ್ಷ ಮಂಜನಗೌಡ ಪಾಟೀಲ, ರುಕ್ಮಿಣಿ ಸಾವಕಾರ, ಎಪಿಎಂಸಿ ವರ್ತಕರ ಸಂಘದ ಅಧ್ಯಕ್ಷ ಸುಧೀರ ಕುರವತ್ತಿ ವೇದಿಕೆಯಲ್ಲಿದ್ದರು.

ನಗರಸಭಾ ಮಾಜಿ ಸದಸ್ಯ ಪ್ರಕಾಶ ಪೂಜಾರ, ರೈತ ಮುಖಂಡ ಹನುಮಂತಪ್ಪ ಕಬ್ಬಾರ, ವರ್ತಕ ಜಿ.ಜಿ. ಹೊಟ್ಟಿಗೌಡ್ರ, ಕನ್ನಡಪರ ಹೋರಾಟಗಾರ ಗಣೇಶ ಗೋಣಿಬಸಮ್ಮನವರ ಮತ್ತಿತರರು ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದರು.



ರಾಣಿಬೆನ್ನೂರು ನಗರದ ನಗರಸಭೆ ಗುಡ್ಡದ ಸ್ಮಾರಕ ಭವನದಲ್ಲಿ ನೂತನ ಬಸ್ ನಿಲ್ದಾಣ ಸ್ಥಳ ಗುರುತಿಸುವಿಕೆ ಕುರಿತು ಕರೆಯಲಾಗಿದ್ದ ಜನಾಭಿಪ್ರಾಯ ಸಂಗ್ರಹ ಸಭೆಯಲ್ಲಿ ಶಾಸಕ ಪ್ರಕಾಶ ಕೋಳಿವಾಡ ಮಾತನಾಡಿದರು.

ಉದ್ಯೋಗ ಖಾತ್ರಿ ಸ್ಥಳದಲ್ಲಿ ಕಾರ್ಮಿಕರ ದಿನಾಚರಣೆ



• **ಕನ್ನಡಪ್ರಭ ವಾರ್ತೆ** ಹಿರೇಕೆರೂರು

ತಾಲೂಕಿನ ಡಮ್ಮಳ್ಳಿ ಗ್ರಾಮದಲ್ಲಿ ಕರ್ನಾಟಕ ವ್ಯವಸಾಯ ವೃತ್ತಿಪರ ಯೂನಿಯನ್ ವತಿಯಿಂದ ಉದ್ಯೋಗ ಖಾತ್ರಿ ಕೆಲಸ ಮಾಡುವ ಜಾಗದಲ್ಲಿ ಇತ್ತಿಚೇಗೆ ಕಾರ್ಮಿಕರ ದಿನ ಆಚರಿಸಲಾಯಿತು.

ರಾಜ್ಯ ಕಮಿಟಿ ಅಧ್ಯಕ್ಷೆ ಶೇಕಪ್ಪ ಶಿವನಕ್ಕನವರ ಮಾತನಾಡಿ. ಕಾರ್ಮಿಕರು ಒಗ್ಗಟ್ಟಾಗಿದ್ದರೆ ಸರ್ಕಾರದ ಸೌಲತ್ತನ್ನು ಪಡೆದುಕೊಳ್ಳಬಹುದು. ಕಾರ್ಮಿಕರು ತಮ್ಮ ಹಕ್ಕುಗಳಗಾಗಿ ಹೋರಾಟ ಮಾಡಲೇಬೇಕು ಏಕೆಂದರೆ ಇದು ಪ್ರಜಾಪ್ರಭುತ್ವದ ವ್ಯವಸ್ಥೆಯಲ್ಲಿ ಹೋರಾಟ ಮುಖಾಂತರ ನಮ್ಮ ಹಕ್ಕುಗಳನ್ನು ಪಡೆದುಕೊಳ್ಳುವ ಪರಿಸ್ಥಿತಿ ನಮಗೆ ಬಂದಿರುತ್ತದೆ. ಕಾರ್ಮಿಕರ ಕಾರ್ಡ್ ಸೌಲಭ್ಯ ಬೇರೆಯವರ ಪಾಲಾಗುತ್ತದೆ. ದಿನಗೂಲಿ ಕೆಲಸ ಮಾಡುವವರಿಗೆ ಸೌಲಭ್ಯ ಸಿಗುವುದಿಲ್ಲ. ಆದ್ದರಿಂದ ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಉದ್ಯೋಗ ಖಾತ್ರಿ ಕೆಲಸ ಮಾಡುವ ಕಾರ್ಮಿಕರಿಗೂ ಕಾರ್ಮಿಕ ಇಲಾಖೆ ಸೌಲಭ್ಯ ಸಿಗಬೇಕೆಂದು ಸಂಘಟನೆ ವತಿಯಿಂದ ಒತ್ತಾಯಿಸುತ್ತದೆ. ಉದ್ಯೋಗ ಖಾತ್ರಿ ಯೋಜನೆ ಕೆಲಸ 125. ದಿನಗಳು ಜಾರಿಯಾಗಿದ್ದು ಇನ್ನೂ ಅನುಷ್ಠಾನಕ್ಕೆ ಬಂದಿರುವುದಿಲ್ಲ. ಅದನ್ನು ಶಿಬಿರದಲ್ಲಿ ಅನುಷ್ಠಾನಕ್ಕೆ ತರಬೇಕು. ದಿನಕ್ಕೆ 600 ಕೂಲಿ ಆಗಬೇಕು ಎಂದು ಒತ್ತಾಯಿಸಲಾಗುವುದು ಎಂದರು. ಕರ್ನಾಟಕ ವ್ಯವಸಾಯ ವೃತ್ತಿಪರ ಯೂನಿಯನ್ ವತಿಯಿಂದ ಕೂಲಿ ಕಾರ್ಮಿಕ ಹಿರಿಯರಿಗೆ ಸನ್ಮಾನಿಸಲಾಯಿತು.

ಈ ವೇಳೆ ತಾಲೂಕು ಕಮಿಟಿ ಕಾರ್ಯದರ್ಶಿ ಚನ್ನಳ್ಳಿ, ನಾಗರಾಜ ಮಳೂರು, ಶ್ವೇತಾ ಚನ್ನಗೌಡ್ರ, ಶಿವಯೋಗೆಪ್ಪ ಚನ್ನಳ್ಳಿ, ಪಾರವ್ವಾ ಸುಣ್ಣದಕೊಪ್ಪ, ಚಂದ್ರಪ್ಪ ಬಳಿಗಾವಿ, ರಾಮಪ್ಪ ಚನ್ನಗೌಡ್ರ, ಬರಮಗೌಡ ಚನ್ನಗೌಡ್ರ ಕೂಲಿ ಕಾರ್ಮಿಕರು ಹಾಜರಿದ್ದರು,

ಧರ್ಮಸಭೆ... ಜ್ಞಾನವಾಹಿನಿ ಮಾಸಿಕ ಧರ್ಮಸಭೆಯಲ್ಲಿ ಹೊನ್ನಾಳಿ ಹಿರೇಕಲ್ಮಠದ ಶಿವಾಚಾರ್ಯರು

ಜ್ಞಾನವು ನಮ್ಮ ಮಾತು, ನಡೆ-ನುಡಿಗಳಲ್ಲಿ ಸಿಹಿತನ ತರುವಂತಿರಲಿ

• **ಕನ್ನಡಪ್ರಭ ವಾರ್ತೆ** ರಾಣಿಬೆನ್ನೂರು

ಗುರು ನಮ್ಮ ಅಜ್ಞಾನವನ್ನು ದೂರ ಮಾಡಿ ಜ್ಞಾನ ಮಾರ್ಗದಲ್ಲಿ ನಡೆಸುವ ದಿವ್ಯ ಶಕ್ತಿ. ಗುರುನಿಷ್ಠೆ ಮತ್ತು ಭಕ್ತಿಯು ಪ್ರತಿಯೊಬ್ಬರ ಬದುಕಿನ ಆಧಾರವಾಗಿರಲಿ ಎಂದು ಹೊನ್ನಾಳಿ ಹಿರೇಕಲ್ಮಠದ ಡಾ. ಒಡೆಯರ ಚೆನ್ನಮಲ್ಲಿಕಾರ್ಜುನ ಶಿವಾಚಾರ್ಯರು ನುಡಿದರು.

ನಗರದ ಚೆನ್ನೇಶ್ವರ ಮಠದಲ್ಲಿ ಸ್ಥಳೀಯ ಹೊನ್ನಾಳಿ ಶ್ರೀ ಚೆನ್ನಮಲ್ಲಕಾರ್ಜುನಸ್ವಾಮಿ ಸಂಸ್ಕೃತಿ ಪ್ರಸಾರ ಪರಿಷತ್ತು ವತಿಯಿಂದ ಆಯೋಜಿಸಿದ್ದ ಜ್ಞಾನವಾಹಿನಿ ಮಾಸಿಕ ಧರ್ಮಸಭೆಯ ಸಾನ್ನಿಧ್ಯ ವಹಿಸಿ ಅವರು ಮಾತನಾಡಿದರು. ಅರಿವು ಕೋಗಿಲೆಯಂತೆ ಮಧುರವಾಗಿರಬೇಕು. ಜ್ಞಾನವು ಕೇವಲ ಪುಸ್ತಕಗಳಲ್ಲಿ ಸೀಮಿತವಾಗಿರದೆ ನಮ್ಮ ಮಾತು, ನಡೆ-ನುಡಿಗಳಲ್ಲಿ ಸಿಹಿತನವನ್ನು ತರುವಂತಿರಲಿ. ಎಲ್ಲರೂ ಜ್ಞಾನವಂತರಾಗಬೇಕು ಎಂಬ ಮನೋಭಾವವು ನಮ್ಮೊಳಗೆ ಬೆಳೆದು, ಸಮಾಜದ ಒಟ್ಟಾರೆ ಬೆಳವಣಿಗೆಗೆ ಕಾರಣವಾಗಲಿ. ಸಹನೆ ಮೂರ್ತಿಯಾಗಿ ಬದುಕುವುದು ಮಹತ್ತರ ಗುಣ. ಸಂಕಷ್ಟಗಳಲ್ಲಿಯೂ ಸಮತೋಲನ ಕಳೆದುಕೊಳ್ಳದೆ ಧೈರ್ಯ ಮತ್ತು ಶಾಂತಿಯೊಂದಿಗೆ ಮುಂದೆ ಸಾಗುವ ಶಕ್ತಿಯನ್ನು ಬೆಳೆಸಿಕೊಳ್ಳಬೇಕು. ನನ್ನನ್ನು ನಾನು ಅರಿಯಬೇಕು ಎಂಬ ಆತ್ಮಚಿಂತನೆ ಪ್ರತಿಯೊಬ್ಬರಿಗೂ ಅನಿವಾರ್ಯ. ಅದರಿಂದಲೇ ನಿಜವಾದ ಅರಿವು ಮತ್ತು ಆತ್ಮಜ್ಞಾನ ದೊರಕುತ್ತದೆ. ಗುರುಗಳ ತಿದ್ದುಪಡಿ ಮತ್ತು ಮಾರ್ಗದರ್ಶನವು ನಮ್ಮ ಬೆಳವಣಿಗೆಯ ಭಾಗವಾಗಿದ್ದು, ಅದನ್ನು ವಿನಯದಿಂದ ಸ್ವೀಕರಿಸುವ ಮನಸ್ಸು ನಮಗಿರಬೇಕು ಎಂದರು.

ನಮ್ಮ ಚಿತ್ತಗುರು ಭಕ್ತಿಯತ್ತ ವಿಷಯ ಕುರಿತು ಹಾವೇರಿಯ ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜಿನ ಉಪನ್ಯಾಸಕ ಡಾ. ಕಾಂತೇಶ ಎನ್. ಅಂಬಿಗೇರ ಉಪನ್ಯಾಸ ನೀಡಿದರು.

ವಿಶೇಷ ಆಹ್ವಾನಿತರಾಗಿ ಆಗಮಿಸಿದ್ದ ಪರಮೇಶಪ್ಪ ಗೂಳಣ್ಣನವರ ಹಾಗೂ ಡಾ. ಶಿವಾನಂದ ಎಸ್. ಹಿತ್ತಲಮನಿ ಇವರುಗಳಿಗೆ ಗುರು ರಕ್ಷೆಯೊಂದಿಗೆ ಸನ್ಮಾನಿಸಲಾಯಿತು

ಸ್ಥಳೀಯ ನಿವೃತ್ತ ಲಿಂಗವಂತ ಸಮಾಜದ ನೌಕರರ ಸಂಘದ ವತಿಯಿಂದ ಬಸವ ಜಯಂತಿ ಅಂಗವಾಗಿ ಶಾಲಾ ಮಕ್ಕಳಿಗಾಗಿ ಬಸವಣ್ಣನವರ ವಚನಗಾಯನ ಸ್ಪರ್ಧೆಯ ವಿಜೇತರಿಗೆ ಬಹುಮಾನ ವಿತರಿಸಲಾಯಿತು.

ಬಸವರಾಜ ಪಟ್ಟಣಶೆಟ್ಟಿ, ಉಮೇಶ ಗುಂಡಗಟ್ಟಿ, ಎಸ್.ಎನ್. ಜಂಗಳೇರ, ಬಿದ್ದಾಡೆಪ್ಪ ಚಕ್ರಸಾಲಿ, ಅಮೃತಗೌಡ ಹಿರೇಮಠ, ಜಗದೀಶ ಮಳಿಮಠ, ನೀಲಾಂಬಿಕಾ ಹಂದ್ಯಾಳಮಠ, ಜಯಶ್ರೀ ಕೆಂಭಾವಿಮಠ, ಗುರುಪಾದದೇವರಮಠ, ಪೂರ್ಣಿಮ ತೊಗರ್ಸಿಮಳೇಮಠ, ವೀರಣ್ಣ ತೊಗರ್ಸಿಮಳೇಮಠ, ಹನುಮಂತಪ್ಪ ಭಜಂತ್ರಿ, ವಿ.ವಿ. ಹರಪನಹಳ್ಳಿ, ಕಸ್ತೂರಮ್ಮ ಪಾಟೀಲ, ಎಸ್.ಎಮ್. ಸಂಕಮ್ಮನವರ, ಎಸ್.ಎನ್. ಪಾಟೀಲ, ಜ್ಯೋತಿ ಕುರವತ್ತಿ, ಸೋಮನಾಥ ಹಿರೇಮಠ, ಎಮ್.ಕೆ. ಹಾಲಸಿದ್ದಯ್ಯ ಶಾಸ್ತ್ರಿಗಳು, ಗೌರೀಶ ನೆಗಳೂರಮಠ, ಶಕುಂತಲಮ್ಮ, ಭಾಗ್ಯಶ್ರೀ ಗುಂಡಗಟ್ಟಿ, ಪಾರ್ವತಿ ಹೊಸಗೌಡರ, ಮಾಲಾ ಮುದಿಗೌಡರ, ಶಕುಂತಲಾ ಪಾಟೀಲ, ಶ್ರೀ ದಾನೇಶ್ವರಿ ಜಾಗೃತಿ ಅಕ್ಕನ ಬಳಗ, ಕದಳಿ ವೇದಿಕೆ ಪದಾಧಿಕಾರಿಗಳಿದ್ದರು.



ರಾಣಿಬೆನ್ನೂರು ನಗರದ ಚೆನ್ನೇಶ್ವರ ಮಠದಲ್ಲಿ ಜರುಗಿದ ಜ್ಞಾನವಾಹಿನಿ ಮಾಸಿಕ ಧರ್ಮಸಭೆಯಲ್ಲಿ ಬಸವಣ್ಣನವರ ವಚನಗಾಯನ ಸ್ಪರ್ಧೆಯ ವಿಜೇತ ಮಕ್ಕಳಿಗೆ ಬಹುಮಾನ ವಿತರಿಸಲಾಯಿತು.

ಮನೆ ಕಳ್ಳತನ: ಆರು ಆರೋಪಿಗಳ ಬಂಧನ

• **ಕನ್ನಡಪ್ರಭ ವಾರ್ತೆ** ಹಾವೇರಿ

ಜಿಲ್ಲೆಯ ಸವಣೂರು ತಾಲೂಕು ಕಳಲಕೊಂಡ ಗ್ರಾಮದ ಮನೆಯೊಂದರಲ್ಲಿ ನಡೆದಿದ್ದ ಕಳ್ಳತನ ಪ್ರಕರಣಕ್ಕೆ ಸಂಬಂಧಿಸಿದಂತೆ ಆರು ಜನ ಆರೋಪಿಗಳನ್ನು ಪೊಲೀಸರು ಪತ್ತೆ ಮಾಡಿ, ಆರೋಪಿಗಳಿಂದ 6.40 ಲಕ್ಷ ರು. ಮೌಲ್ಯದ ಚಿನ್ನಾಭರಣವನ್ನು ವಶಕ್ಕೆ ಪಡೆಯಲಾಗಿದೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಯಶೋದಾ ವಂಟಗೋಡಿ ತಿಳಿಸಿದ್ದಾರೆ. ಗದಗ ಜಿಲ್ಲೆ ಲಕ್ಷ್ಮೇಶ್ವರ ತಾಲೂಕು ಆದರಹಳ್ಳಿ ಗ್ರಾಮದ ಅರ್ಜುನ ಲಿಂಗಪ್ಪ ಪವಾರ (28), ಆಕಾಶ ಗೋಪಿ ಲಮಾಣಿ (19), ಡಿಸ್ಟ್ ಲಿಂಗಪ್ಪ ಪವಾರ (40), ಲಿಂಗಪ್ಪ ದದಬಾ ಪವಾರ (52), ಮಲ್ಲಿಕಾರ್ಜುನ ಗೋಪಿ ಲಮಾಣಿ (25) ಹಾಗೂ ಗಣೇಶ ಲಿಂಗಪ್ಪ ಪವಾರ (20) ಎಂಬ ಆರೋಪಿಗಳನ್ನು ದಸ್ತಗಿರಿ ಮಾಡಿ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ. ಸವಣೂರ ಪೊಲೀಸ್ ಠಾಣೆಯ ವ್ಯಾಪ್ತಿಯ ಕಳಲಕೊಂಡ ಗ್ರಾಮದಲ್ಲಿ ಸಿದ್ದಲಿಂಗಯ್ಯಸ್ವಾಮಿ ಹಿರೇಮಠ ಎಂಬುವವರ ಮನೆಯಲ್ಲಿ ಏ. 14ರಂದು ರಾತ್ರಿ ವೇಳೆ ಮನೆಯ ಬಾಗಿಲಿಗೆ ಹಾಕಿದ್ದ ಕೀಲಿ ಮುರಿದು, ಒಳನುಗ್ಗಿ ತಿಜೋರಿಯಲ್ಲಿದ್ದ 12.40 ಲಕ್ಷ ರು. ಮೌಲ್ಯದ 12 ತೊಲೆ ಬಂಗಾರದ ಆಭರಣ, 10,800 ರು. ಕಿಮ್ಮತ್ತಿನ ಬೆಳ್ಳಿ ಆಭರಣ, 5 ಲಕ್ಷ ರು. ನಗದು ಸೇರಿದಂತೆ ಬರೊಬ್ಬರಿ 17.50 ಲಕ್ಷ ರು. ಮೌಲ್ಯದ ಸ್ವತ್ತನ್ನು ಕಳ್ಳತನ ಮಾಡಿದ್ದರು. ಈ ಬಗ್ಗೆ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ ಬಳಿಕ, ಪೊಲೀಸರು ಮೇಲಧಿಕಾರಿಗಳ ಮಾರ್ಗದರ್ಶನದಲ್ಲಿ ವಿಶೇಷ ತನಿಖಾ ತಂಡವನ್ನು ರಚಿಸಿ, ಕಾರ್ಯಾಚರಣೆ ನಡೆಸಿದ ಬಳಿಕ ಆರೋಪಿಗಳು ಸಿಕ್ಕಿ ಬಿದ್ದಿದ್ದಾರೆ. ಬಂಧಿತ ಆರೋಪಿಗಳಿಂದ ಈ ಪ್ರಕರಣಕ್ಕೆ ಸಂಬಂಧಿಸಿದಂತೆ 6.40 ಲಕ್ಷ ರು. ಮೌಲ್ಯದ ಚಿನ್ನಾಭರಣ ವಶಪಡಿಸಿಕೊಳ್ಳಲಾಗಿದೆ. ಇದೇ ರೀತಿ ಗುತ್ತಲ ಪೊಲೀಸ್ ಠಾಣೆಯ ವ್ಯಾಪ್ತಿಯಲ್ಲಿ ನಡೆದ ಕಳ್ಳತನ ಪ್ರಕರಣಕ್ಕೆ ಸಂಬಂಧಿಸಿದಂತೆ 1,70,000 ರು. ಲಕ್ಷ್ಮೇಶ್ವರ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ನಡೆದಿದ್ದ ಕಳ್ಳತನ ಪ್ರಕರಣಕ್ಕೆ ಸಂಬಂಧಿಸಿದಂತೆ 1,20,000 ರು. ಮೌಲ್ಯದ ಸ್ವತ್ತುಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪ್ರಧಾನಮಂತ್ರಿ ನರೇಂದ್ರ ಮೋದಿಜೀಯವರ ಕಾರ್ಯವೈಖರಿಗೆ ಜನ ಬೆಂಬಲ ಸೂಚಿಸಿ ಪಂಚರಾಜ್ಯಗಳ ಚುನಾವಣೆಯಲ್ಲಿ ಬಿಜೆಪಿ ಮತ ನೀಡಿದ್ದಾರೆ.
• **ವಿರೂಪಾಕ್ಷಪ್ಪ ಬಳ್ಳಾರಿ** ಬಿಜೆಪಿ ಜಿಲ್ಲಾಧ್ಯಕ್ಷ

ಸುದ್ದಿ ಸಿಂಚನ

ಜಿಯೋಫಿಸಿಕಲ್ ಸರ್ವೇ, ಆತಂಕ ಬೇಡ

ಹಾವೇರಿ: ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಜಿಯೋಲಜಿಕಲ್ ಸರ್ವೇ ಆಫ್ ಇಂಡಿಯಾ ವತಿಯಿಂದ ಜು. 31ರ ವರೆಗೆ ಏರ್‌ಕ್ರಾಫ್ಟ್ ಮೂಲಕ ಏರ್‌ಬಾರ್ನ್ ಜಿಯೋಫಿಸಿಕಲ್ ಸರ್ವೇ ಕಾರ್ಯ ನಡೆಯುತ್ತಿದೆ. ಈ ಹಿನ್ನೆಲೆಯಲ್ಲಿ ಕೆಲವು ದಿನಗಳಿಂದ ಹಾವೇರಿ ಜಿಲ್ಲೆಯ ಹಿರೇಕೆರೂರು, ಹಾನಗಲ್ಲ ಹಾಗೂ ಶಿಗ್ಗಾಂವಿ ತಾಲೂಕಿನಲ್ಲಿ ಭೂಮೇಲ್ಮೈಯಿಂದ ಕಡಿಮೆ ಅಂತರದಲ್ಲಿ ಏರ್‌ಕ್ರಾಫ್ಟ್ ಹಾರಾಟ ಕಂಡು ಬರುತ್ತಿದ್ದು, ಇದು ಕೇವಲ ಜಿಯೋಫಿಸಿಕಲ್ ಸರ್ವೇ ಕಾರ್ಯಕ್ಕೆ ಸೀಮಿತವಾಗಿರುವುದರಿಂದ ಸಾರ್ವಜನಿಕರು ಭಯ, ಆತಂಕ ಪಡಬಾರದೆಂದು ಜಿಲ್ಲಾ ಪೊಲೀಸ್ ಅಧೀಕ್ಷಕರ ಕಚೇರಿ ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನರೇಗಾ ಯೋಜನೆಯಡಿ ಸ್ಥಳೀಯವಾಗಿ ಕೆಲಸ ನೀಡಲಾಗುವುದು



ರಾಣೆಬೆನ್ನೂರು: ಬೇಸಿಗೆಯ ಸಮಯದಲ್ಲಿ ಕೂಲಿ ಕಾರ್ಮಿಕರು ಕೆಲಸ ಅರಸಿ ಪರಸ್ಥಳಗಳಿಗೆ ತೆರಳದಂತೆ ಅವರಿಗೆ ಸ್ಥಳೀಯವಾಗಿ ನರೇಗಾ ಯೋಜನೆಯಡಿ ಕೆಲಸ ನೀಡಲಾಗುತ್ತದೆ ಎಂದು ತಾಲೂಕು ಐಇಸಿ ಸಂಯೋಜಕ ದಿಂಗಾಲೇಶ ಅಂಗೂರ ಹೇಳಿದರು. ತಾಲೂಕಿನ ಗುಡುಗೂರು ಗ್ರಾಮ ಪಂಚಾಯತ ವ್ಯಾಪ್ತಿಯ ದೊಡ್ಡ ಕೆರೆ ಕಾಮಗಾರಿ ಸ್ಥಳದಲ್ಲಿ ಸೋಮವಾರ ಆಯೋಜಿಸಿದ್ದ ರೋಜಾಗಾರ್ ದಿನಾಚರಣೆಯಲ್ಲಿ ಅವರು ಮಾತನಾಡಿದರು. ತಾಲೂಕಿನ ಎಲ್ಲಾ 40 ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ನರೇಗಾ ಯೋಜನೆಯಡಿ ಕೂಲಿ ಕಾರ್ಮಿಕರಿಗೆ ಕೂಲಿ ಕೆಲಸ ನೀಡಲಾಗುತ್ತದೆ. ಕೆಲಸ ಅರಸಿ ಯಾರೂ ವಲಸೆ ಹೋಗಬಾರದು ಎಂದರು. ಗ್ರಾಮ ಪಂಚಾಯತ ಕಾರ್ಯದರ್ಶಿ ಅನುರಾದ ಪಾಟೀಲ, ಬಿಎಫ್‌ಟಿಗಳಾದ ನಾಗರಾಜ ಮಾಚೇನಹಳ್ಳಿ, ಹನುಮಂತ ಬಿ.ಎಂ., ಗ್ರಾಮ ಕಾಯಕ ಮಿತ್ರ ಗಂಗಮ್ಮ ನಾಯ್ಕರ ಕೂಲಿ ಕಾರ್ಮಿಕರು ಇದ್ದರು.

ವಿಷ ಸೇವಿಸಿ ಅಸ್ವಸ್ಥರಾಗಿದ್ದ ಮಹಿಳೆ ಸಾವು

ಹಾವೇರಿ: ವರ್ಷದ ಹಿಂದೆ ಹಾವು ಕಡಿತಕ್ಕೆ ಒಳಗಾಗಿದ್ದ ಮಹಿಳೆಯೊಬ್ಬರು ವಿಷ ಸೇವಿಸಿ ಅಸ್ವಸ್ಥಗೊಂಡಿದ್ದರಿಂದ ಉಪಚಾರಕ್ಕೆ ಆಸ್ಪತ್ರೆಗೆ ದಾಖಲಿಸಿದಾಗ ಚಿಕಿತ್ಸೆ ಫಲಿಸದೆ ಮೃತಪಟ್ಟಿರುವ ಘಟನೆ ತಾಲೂಕಿನ ಕಾಟೇನಹಳ್ಳಿ ಗ್ರಾಮದಲ್ಲಿ ನಡೆದಿದೆ. ಕಾಟೇನಹಳ್ಳಿ ಗ್ರಾಮದ ನಮಾಜಬಿ ಕೋಂ.ಶರೀಫಸಾಬ ನದಾಫ (60) ಮೃತ ಮಹಿಳೆಯಾಗಿದ್ದಾರೆ. ಇವರಿಗೆ ಒಂದು ವರ್ಷದ ಹಿಂದೆ ಹಾವು ಕಚ್ಚಿದ್ದರಿಂದ ಕಾಲಿನಲ್ಲಿ ಗಡ್ಡೆಯಾಗಿತ್ತು. ಅದನ್ನೇ ಮನಸ್ಸಿಗೆ ಹಚ್ಚಿಕೊಂಡು ಚಿಂತೆಗೀಡಾಗಿ ಮನೆಯಲ್ಲಿ ಯಾರೂ ಇಲ್ಲದಿರುವಾಗ ವಿಷ ಸೇವಿಸಿ ಅಸ್ವಸ್ಥಗೊಂಡಿದ್ದಾಳೆ. ಕೂಡಲೇ ಚಿಕಿತ್ಸೆಗೆಂದು ಆಸ್ಪತ್ರೆಗೆ ದಾಖಲಿಸಿದಾಗ ಚಿಕಿತ್ಸೆ ಫಲಕಾರಿಯಾಗದೆ ಮೃತಪಟ್ಟಿದ್ದಾರೆ ಎಂದು ಮೃತರ ಮಗಳು ಸಲ್ಮಾಬಾನು ನದಾಫ ಪೊಲೀಸರ ದೂರಿನಲ್ಲಿ ತಿಳಿಸಿದ್ದಾರೆ. ಹಾವೇರಿ ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಅಕ್ರಮವಾಗಿ ಮರಳು ಸಾಗಿಸುತ್ತಿದ್ದ ಟ್ರ್ಯಾಕ್ಟರ್ ವಶ

ಹಾವೇರಿ: ವರದಾ ನದಿ ಪಾತ್ರದಲ್ಲಿ ಅಕ್ರಮವಾಗಿ ಮರಳು ಸಂಗ್ರಹಿಸಿ ಸಾಗಾಟ ಮಾಡುತ್ತಿದ್ದ ಟ್ರ್ಯಾಕ್ಟರ್‌ನ್ನು ಪೊಲೀಸರು ವಶಪಡಿಸಿಕೊಂಡಿರುವ ಘಟನೆ ತಾಲೂಕಿನ ಬಸಾಪುರ ಗ್ರಾಮದ ಹೊರವಲಯದಲ್ಲಿ ನಡೆದಿದೆ. ಬಸಾಪುರ ಗ್ರಾಮದ ಚಾಲಕ ನಾಗರಾಜ ಮರಿಯಪ್ಪ ಚಾವಡಿ ಹಾಗೂ ಟ್ರ್ಯಾಕ್ಟರ್‌ನ ಮಾಲೀಕನ ವಿರುದ್ಧ ದೂರು ದಾಖಲಿಸಲಾಗಿದೆ. ಆರೋಪಿ ಮರೋಳ ಗ್ರಾಮದ ವರದಾ ನದಿ ಪಾತ್ರದಲ್ಲಿ ಅಕ್ರಮವಾಗಿ ಮರಳನ್ನು ಟ್ರ್ಯಾಕ್ಟರ್‌ನಲ್ಲಿ ಲೋಡ್ ಮಾಡಿಕೊಂಡು ಸಾಗಾಟ ಮಾಡುತ್ತಿರುವಾಗ ಸಿಕ್ಕಿಬಿದ್ದಿದ್ದಾರೆ ಎಂದು ಪೊಲೀಸರು ಸ್ವಯಂ ದೂರು ದಾಖಲಿಸಿಕೊಂಡಿದ್ದಾರೆ. ಗುತ್ತಲ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕೈ ಕಾರ್ಯಕರ್ತರಿಂದ ವಿಜಯೋತ್ಸವ

ಬಾಗಲಕೋಟೆ, ದಾವಣಗೆರೆ ದಕ್ಷಿಣ ವಿಧಾನಸಭೆ ಕ್ಷೇತ್ರದ ಉಪ ಚುನಾವಣೆ



ಬಾಗಲಕೋಟೆ ಹಾಗೂ ದಾವಣಗೆರೆ ಉಪ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿಗಳು ಗೆಲುವು ಸಾಧಿಸಿದ ಹಿನ್ನೆಲೆ ನಗರದ ಹೊಸಮನಿ ಸಿದ್ದಪ್ಪ ವೃತ್ತದಲ್ಲಿ ಜಿಲ್ಲಾ ಕಾಂಗ್ರೆಸ್ ವತಿಯಿಂದ ಪಟಾಕಿ ಸಿಡಿಸಿ, ಸಿಹಿ ಹಂಚಿ ವಿಜಯೋತ್ಸವ ಆಚರಿಸಲಾಯಿತು.

• **ಕನ್ನಡಪ್ರಭ ವಾರ್ತೆ** ಹಾವೇರಿ

ಬಾಗಲಕೋಟೆ ಹಾಗೂ ದಾವಣಗೆರೆ ದಕ್ಷಿಣ ವಿಧಾನಸಭೆ ಕ್ಷೇತ್ರದ ಉಪ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷದ ಅಭ್ಯರ್ಥಿಗಳು ಗೆಲುವು ಸಾಧಿಸಿದ ಹಿನ್ನೆಲೆ ನಗರದ ಹೊಸಮನಿ ಸಿದ್ದಪ್ಪ ವೃತ್ತದಲ್ಲಿ ಸೋಮವಾರ ಸಂಜೆ ಜಿಲ್ಲಾ ಕಾಂಗ್ರೆಸ್ ಸಮಿತಿಯ ಮುಖಂಡರು ಹಾಗೂ ಕಾರ್ಯಕರ್ತರು ಪಟಾಕಿ ಸಿಡಿಸಿ, ಸಿಹಿ ಹಂಚುವ ಮೂಲಕ ವಿಜಯೋತ್ಸವವನ್ನು ಆಚರಿಸಿದರು.

ಈ ವೇಳೆ ಮಾತನಾಡಿದ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಸಂಜೀವಕುಮಾರ ನೀರಲಗಿ, ದಾವಣಗೆರೆ ಹಾಗೂ ಬಾಗಲಕೋಟೆಯಲ್ಲಿ ನಡೆದ ಉಪ ಚುನಾವಣೆಯ ಗೆಲುವು ರಾಜ್ಯದ ಮುಖ್ಯಮಂತ್ರಿ ಸಿದ್ದರಾಮಯ್ಯ, ಡಿಸಿಎಂ ಡಿಕೆಶಿ ಅವರಿಗೆ ಸಿಕ್ಕ ಜಯವಾಗಿದೆ. ರಾಜ್ಯದ ಮತದಾರರು ಕಾಂಗ್ರೆಸ್ ಪರವಾಗಿದ್ದಾರೆ. ಸಿದ್ದರಾಮಯ್ಯ ಹಾಗೂ ಡಿಕೆ ಶಿವಕುಮಾರ ನಾಯಕತ್ವವನ್ನು ಜನರು ಒಪ್ಪಿಕೊಂಡು ಎರಡೂ ಕ್ಷೇತ್ರದಲ್ಲಿ ಪಕ್ಷದ ಅಭ್ಯರ್ಥಿಗಳಿಗೆ ಆಶೀರ್ವದಿಸಿ ಗೆಲುವು ತಂದುಕೊಟ್ಟಿದ್ದಾರೆ. ಮುಂಬರುವ 2028ರ ಚುನಾವಣೆಯಲ್ಲೂ ಕೂಡ ಕಾಂಗ್ರೆಸ್ ಪಕ್ಷ ನೂರಕ್ಕೆ ನೂರರಷ್ಟು ಅಧಿಕಾರಕ್ಕೆ ಬರುತ್ತದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಶಾಸಕ ರುದ್ರಪ್ಪ ಲಮಾಣಿ ಮಾತನಾಡಿ, ರಾಜ್ಯದ ದಾವಣಗೆರೆ ಹಾಗೂ ಬಾಗಲಕೋಟೆಯಲ್ಲಿ ನಡೆದ ಉಪಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿಗಳು ಗೆಲುವು ಸಾಧಿಸುವ ಮೂಲಕ ಸರಕಾರಕ್ಕೆ ಶಕ್ತಿಯನ್ನು ತುಂಬಿದ್ದಾರೆ. ಸರಕಾರದ ಪಂಚ ಗ್ಯಾರಂಟಿ ಯೋಜನೆಗಳು ಪಕ್ಷದ ಅಭ್ಯರ್ಥಿಗಳಿಗೆ ಶ್ರೀರಕ್ಷೆಯಾಗಿ ಗೆಲುವು ತಂದುಕೊಟ್ಟಿವೆ. ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ.

- ಉಪ ಚುನಾವಣೆಯ ಗೆಲುವು ರಾಜ್ಯದ ಮುಖ್ಯಮಂತ್ರಿ ಸಿದ್ದರಾಮಯ್ಯ, ಡಿಸಿಎಂ ಡಿಕೆಶಿ ಅವರಿಗೆ ಸಿಕ್ಕ ಜಯವಾಗಿದೆ
- ಸಿದ್ದರಾಮಯ್ಯ ಹಾಗೂ ಡಿಕೆ ಶಿವಕುಮಾರ ನಾಯಕತ್ವವನ್ನು ಜನರು ಒಪ್ಪಿಕೊಂಡು ಎರಡೂ ಕ್ಷೇತ್ರದಲ್ಲಿ ಪಕ್ಷದ ಅಭ್ಯರ್ಥಿಗಳಿಗೆ ಆಶೀರ್ವದಿಸಿ ಗೆಲುವು ತಂದುಕೊಟ್ಟಿದ್ದಾರೆ

ಶಿವಕುಮಾರ ನಾಯಕತ್ವದಲ್ಲಿ ನಮ್ಮ ಸರಕಾರ ಜನಪರ ಆಡಳಿತ ನಡೆಸುತ್ತಿದೆ. ಮುಂಬರುವ ದಿನಗಳಲ್ಲೂ ರಾಜ್ಯದಲ್ಲಿ ಉತ್ತಮ ಆಡಳಿತ ನಡೆಸಲಿದ್ದೇವೆ ಎಂದು ತಿಳಿಸಿದರು.

ಈ ವೇಳೆ ಕೆಸಿಸಿ ಬ್ಯಾಂಕಿನ ನಿರ್ದೇಶಕ ಕೊಟ್ರೇಶಪ್ಪ ಬಸೇಗಣ್ಣಿ, ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಎಸ್.ಎಫ್.ಎನ್. ಗಾಜಿಗೌಡ್ರ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಶಂಕರ ಮೆಹರವಾಡೆ, ಯೂತ್ ಕಾಂಗ್ರೆಸ್ ಮಾಜಿ ಅಧ್ಯಕ್ಷ ಪ್ರಸನ್ನ ಹಿರೇಮಠ, ಉಮರ್ ಇನಾಮದಾರ, ಶಕೀಲ್ ನದಾಫ, ಜಮೀರ್‌ಜಿಗರಿ, ಜಗದೀಶ್ ಬೆಟಗೇರಿ, ಬಸವರಾಜ ಜಾಬಿನ, ಮುತ್ತು ಕೊರವರ, ಕರಬಸಪ್ಪ ಹಲಗಣ್ಣವರ, ಮಹಾಲಿಂಗಯ್ಯ ಪಾಟೀಲ, ಶಿವರಾಜ ಮತ್ತಿಹಳ್ಳಿ, ಬಾಬುಸಾಬ್ ಮೊಮಿನಗಾರ, ಸಿ.ಎಸ್ ಲಕ್ಷ್ಮೇಶ್ವರಮಠ, ಗುಡ್ಡನಗೌಡ ಅಂದಾನಿಗೌಡ್ರ, ಅತಾವುಲ್ಲಾ ಖಾಜಿ, ಮಲ್ಲೇಶಪ್ಪ ಪಟ್ಟಣಶೆಟ್ಟಿ, ರಾಜು ಡೊಳ್ಳಿನ, ಪ್ರೇಮಾ ಪಾಟೀಲ, ಶಾಂತಕ್ಕ ಶಿರೂರ, ಮಮತಾ ಜಾಬೀನ್, ಗೀತಾ ಪ್ರಕಾಶ, ನಂದಾ ಕಳಸದ, ಜಯಶ್ರೀ ಶಿವಪುರ, ವೀಣಾ ಹಲಗಣ್ಣವರ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

ವಿಜಯೋತ್ಸವದ ಸಂಭ್ರಮಾಚರಣೆ

• **ಕನ್ನಡಪ್ರಭ ವಾರ್ತೆ** ಹಾನಗಲ್ಲ

ದಾವಣಗೆರೆ ಮತ್ತು ಬಾಗಲಕೋಟೆ ವಿಧಾನಸಭಾ ಕ್ಷೇತ್ರಗಳ ಉಪ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿಗಳು ವಿಜಯ ಸಾಧಿಸಿದ ಹಿನ್ನೆಲೆಯಲ್ಲಿ ಪಟ್ಟಣದಲ್ಲಿ ಸೋಮವಾರ ಮಧ್ಯಾಹ್ನ ಕಾಂಗ್ರೆಸ್ ಕಾರ್ಯಕರ್ತರು ಸಂಭ್ರಮಾಚರಿಸಿದರು.

ಇಲ್ಲಿನ ಬಸ್ ನಿಲ್ದಾಣದ ಬಳಿಯ ಕನಕ ವೃತ್ತದಲ್ಲಿ ಜಮಾಯಿಸಿದ ಕಾರ್ಯಕರ್ತರು ಪಟಾಕಿ ಸಿಡಿಸಿ, ಪರಸ್ಪರ ಸಿಹಿ ತಿನ್ನಿಸಿ ಖುಷಿ ಪಟ್ಟರು. ಈ ಸಂದರ್ಭದಲ್ಲಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ಹನುಮಂತಪ್ಪ ಮರಗಡಿ, ಮಂಜು ಗೊರಣ್ಣನವರ ಮಾತನಾಡಿ, ಕರ್ನಾಟಕದ ಮತದಾರರು ಜನಪರವಾಗಿರುವ ಕಾಂಗ್ರೆಸ್ ಪಕ್ಷವನ್ನು ಆಯ್ಕೆ ಮಾಡಿಕೊಂಡಿದ್ದಾರೆ. ಬಿಜೆಪಿ ಹುಸಿ ಭರವಸೆ ನೀಡುವುದನ್ನು ರೂಢಿ ಮಾಡಿಕೊಂಡಿದ್ದರೆ ಕಾಂಗ್ರೆಸ್ ಪಕ್ಷ ನೀಡಿದ ಅಷ್ಟೂ ಭರವಸೆಗಳನ್ನು ಈಡೇರಿಸಿ ಗ್ಯಾರಂಟಿ ಸರ್ಕಾರ ನೀಡುತ್ತಿದೆ. ದಾವಣಗೆರೆ ಮತ್ತು ಬಾಗಲಕೋಟೆ ಎರಡೂ ಕ್ಷೇತ್ರಗಳಲ್ಲಿಯೂ ಸಹ ಕಾಂಗ್ರೆಸ್ ಸೋಲಿಸಲು ಬಿಜೆಪಿ ಶತಪ್ರಯತ್ನ ಮಾಡಿದರೂ ಮತದಾರರು ಮಾತ್ರ ಜಾಣ ನಿರ್ಧಾರ ಕೈಗೊಂಡಿದ್ದಾರೆ. ಪಂಚ ಗ್ಯಾರಂಟಿ ಯೋಜನೆಗಳಿಗೆ ಮತದಾರರು ಜೈ ಎಂದಿದ್ದಾರೆ ಎಂದರು.

ನಗರ ಕಾಂಗ್ರೆಸ್ ಅಧ್ಯಕ್ಷ ಮತೀನ್ ಶಿರಬಡಗಿ ಸೇರಿದಂತೆ ಹಲವಾರು ಮುಖಂಡರು, ಕಾರ್ಯಕರ್ತರು ಈ ಸಂದರ್ಭದಲ್ಲಿ ಪಾಲ್ಗೊಂಡಿದ್ದರು.



ದಾವಣಗೆರೆ ಮತ್ತು ಬಾಗಲಕೋಟೆ ವಿಧಾನಸಭಾ ಕ್ಷೇತ್ರಗಳ ಉಪ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿಗಳು ವಿಜಯ ಸಾಧಿಸಿದ ಹಿನ್ನೆಲೆಯಲ್ಲಿ ಹಾನಗಲ್‌ನಲ್ಲಿ ಕಾಂಗ್ರೆಸ್ ಕಾರ್ಯಕರ್ತರು ಸಂಭ್ರಮಾಚರಿಸಿದರು.

ಬಿಜೆಪಿಯಿಂದ ವಿಜಯೋತ್ಸವ

ಚುನಾವಣೆಯಲ್ಲಿ ಭರ್ಜರಿ ಗೆಲುವು | ಸಿಹಿ ವಿತರಣೆ



ಹಾವೇರಿ ಎಂ.ಜಿ. ವೃತ್ತದಲ್ಲಿ ಬಿಜೆಪಿ ಕಾರ್ಯಕರ್ತರು ವಿಜಯೋತ್ಸವ ಆಚರಿಸಿದರು.

• **ಕನ್ನಡಪ್ರಭ ವಾರ್ತೆ** ಹಾವೇರಿ

ಪಶ್ಚಿಮ ಬಂಗಾಳ, ಅಸ್ಸಾಂ, ಪುದುಚೇರಿಯಲ್ಲಿ ಬಿಜೆಪಿ ಭರ್ಜರಿ ಗೆಲುವು ಸಾಧಿಸಿದ ಹಿನ್ನೆಲೆಯಲ್ಲಿ ಸೋಮವಾರ ನಗರದ ಎಂ.ಜಿ.ವೃತ್ತದಲ್ಲಿ ಬಿಜೆಪಿ ಮುಖಂಡರು, ಕಾರ್ಯಕರ್ತರು ಪಟಾಕಿ ಸಿಡಿಸಿ, ಸಿಹಿ ವಿತರಿಸಿ ವಿಜಯೋತ್ಸವ ಆಚರಿಸಿದರು.

ಈ ವೇಳೆ ಬಿಜೆಪಿ ಜಿಲ್ಲಾಧ್ಯಕ್ಷ ವಿರೂಪಾಕ್ಷಪ್ಪ ಬಳ್ಳಾರಿ ಮಾತನಾಡಿ, ಪಕ್ಷ ಇಂದು ದಾಖಲೆ ನಿರ್ಮಿಸಿದೆ. ಪ್ರಧಾನಮಂತ್ರಿ ನರೇಂದ್ರ ಮೋದಿಜೀಯವರ ಕಾರ್ಯವೈಖರಿಗೆ ಜನ ಬೆಂಬಲ ಸೂಚಿಸಿಪಂಚರಾಜ್ಯಗಳಚುನಾವಣೆಯಲ್ಲಿ ಬಿಜೆಪಿ ಮತ ನೀಡಿದ್ದಾರೆ. ಪಶ್ಚಿಮ ಬಂಗಾಳ, ಅಸ್ಸಾಂಮತ್ತು ಪುದುಚೇರಿಯಲ್ಲಿ ಬಿಜೆಪಿ ಹೆಚ್ಚು ಸ್ಥಾನಗಳನ್ನು ಪಡೆದು ಅಧಿಕಾರದ ಚುಕ್ಕಾಣಿ ಹಿಡಿದಿದೆ. ಮಮತಾ ಬ್ಯಾನರ್ಜಿ ಹಲವು ವರ್ಷಗಳಿಂದ ಮುಖ್ಯಮಂತ್ರಿಯಾಗಿ ಬಾಂಗ್ಲಾದೇಶದ ಅಕ್ರಮ ನುಸುಳುಕೋರರಿಗೆ ಸಹಾಯ, ಸಹಕಾರ ನೀಡುವ ಮೂಲಕ ಪಶ್ಚಿಮ ಬಂಗಾಳದಲ್ಲಿ ವಾಸಿಸಲು ಅವಕಾಶ ನೀಡಿ ದೇಶದ ಭದ್ರತೆಗೆ ಆತಂಕ ಸೃಷ್ಟಿಸಿದ್ದರು. 2026ರ ಚುನಾವಣೆಯಲ್ಲಿ ಮತದಾರರು ದೇಶದ ಪರವಾಗಿ ಮತ ಚಲಾಯಿಸುವ ಮೂಲಕ ಮಮತಾ ಬ್ಯಾನರ್ಜಿಗೆ ತಕ್ಕ ಉತ್ತರ ನೀಡಿದ್ದಾರೆ. ಮುಂಬರುವ ದಿನಗಳಲ್ಲಿ ಬಿಜೆಪಿ ದೇಶದ ಜನರಿಗೆ ಇನ್ನೂ ಅಧಿಕ ಸೇವೆ ಸಲ್ಲಿಸುವ ಮೂಲಕ ಇನ್ನೂ ಹಲವು ರಾಜ್ಯಗಳಲ್ಲಿ ಅಧಿಕಾರದ ಚುಕ್ಕಾಣಿ ಹಿಡಿಯಲಿದೆ ಎಂದರು.

ಮಾಜಿ ಶಾಸಕ ಶಿವರಾಜ ಸಜ್ಜನರ ಮಾತನಾಡಿ, ಪಕ್ಷ ಇಂದು ವಿಶ್ವದ ಬಲಿಷ್ಠ ಪಕ್ಷವಾಗಿ ಬೆಳದಿದೆ. ಪಶ್ಚಿಮ ಬಂಗಾಳದ ಇತಿಹಾಸದಲ್ಲಿ ಇದೇ ಮೊದಲ ಬಾರಿಗೆ ಬಿಜೆಪಿ ಬಹುಮತ ಪಡೆಯುವ ಮೂಲಕ ಇತಿಹಾಸ ನಿರ್ಮಿಸಿದೆ. ಪಶ್ಚಿಮ ಬಂಗಾಳದಲ್ಲಿ ಮಮತಾ ಬ್ಯಾನರ್ಜಿಯ ದುರಾಡಳಿತಕ್ಕೆ ಬೇಸತ್ತ ಜನರು ರಾಷ್ಟ್ರ ಸುರಕ್ಷತೆಯ ದೃಷ್ಟಿಯಿಂದ ಬಿಜೆಪಿಗೆ ಮತ ನೀಡಿದ್ದಾರೆ. ಅಲ್ಲದೇ ಅಸ್ಸಾಂ ಹಾಗೂ ಪುದುಚೇರಿಯಲ್ಲಿ ಬಿಜೆಪಿ ಬಹುಮತ ಪಡೆದಿದೆ.ಕೇರಳಹಾಗೂತಮಿಳುನಾಡಿನಲ್ಲಿ ಕಳೆದ ಚುನಾವಣೆಗಿಂತ ಈ ಬಾರಿ ಹೆಚ್ಚು ಮತಗಳನ್ನು ಗಳಿಸಲು ಸಫಲವಾಗಿದೆ ಎಂದರು.

ಬಿಜೆಪಿ ಇಂದು ಬಡವರ ಹಾಗೂ ಜನಸಾಮಾನ್ಯರ ಪಕ್ಷವಾಗಿ ಜನರ ವಿಶ್ವಾಸ ಗಳಿಸುವಲ್ಲಿ ಸಫಲವಾಗಿದೆ. ಮುಂಬರುವ ದಿನಗಳಲ್ಲಿ ದೇಶದಲ್ಲಿರುವ ಎಲ್ಲ ರಾಜ್ಯಗಳಲ್ಲಿ ಬಿಜೆಪಿ ಅಧಿಕಾರಕ್ಕೆ ಬರಲಿದೆ ಎಂದರು.

ಈ ಸಂದರ್ಭದಲ್ಲಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಡಾ.ಸಂತೋಷ ಆಲದಕಟ್ಟಿ, ಮಾಧ್ಯಮ ಪ್ರಮುಖ ವಿಜಯಕುಮಾರ ಚಿನ್ನಿಕಟ್ಟಿ, ಲತಾ ಬಡ್ನಿಮಠ, ಮಂಜುನಾಥ ಮಡಿವಾಳರ, ಗುಡ್ಡಪ್ಪ ಭರಡಿ, ನಾಗರಾಜ ಹರಿಗೋಲ, ಮಧುಕೇಶ ಹಂದ್ರಾಳ, ಕುಮಾರ ಹತ್ತಿ, ಶಂಭುಲಿಂಗ ಹತ್ತಿ, ರೋಹಿಣಿ ಪಾಟೀಲ, ರಾಮಕ್ಕ ವಡ್ಡರ, ರೇಣುಕಾ ಗೌಳಿ, ನಖೀಲ್ ಡೊಗ್ಗಳಿ, ಮಂಜು ಮಲಗೋಡ, ಶ್ರೀಕಾಂತ ವಡ್ಡರ, ಭಾಗ್ಯಶ್ರೀ ಮೋರೆ, ಫಕ್ಕಿರೇಶ ಯಾದವ, ವಿ.ಬಿ.ಕುಲುಮಿ, ಸುನೀಲ ರಾಯ್ಕರ, ಸದಾನಂದ ಸುರಳಿಹಳ್ಳಿ, ಎಂ.ಎಸ್. ಪಾಟೀಲ, ಉಜನೇಶ ಮೇಟಿ, ಚಂದ್ರಶೇಖರ ಅಗಡಿ, ಪವನ ಎರೆಸೀಮಿ, ಕುಶಾಲ್ ಕನವಳ್ಳಿ, ವಿಶ್ವನಾಥ ಕಿತ್ತೂರಮಠ, ಆನಂದ ಕಲಾಲ, ಕಿರಣ ಖಂಡೇಲವಾಲ, ಮುತ್ತಣ್ಣ ಮುಷ್ಠಿ, ಯಲ್ಲಪ್ಪ ಮಡಿವಾಳರ, ಅಕ್ಕಮ ಹರ್ತಿ, ಶ್ರೀದೇವಿ ಹಿರೇಮಠ ಸೇರಿದಂತೆ ಪಕ್ಷದ ಕಾರ್ಯಕರ್ತರು ಪಾಲ್ಗೊಂಡಿದ್ದರು.

ಬೀಜ, ಗೊಬ್ಬರಕ್ಕೆ ಎಫ್‌ಐಡಿ ಕಡ್ಡಾಯ ಆದೇಶ ಕೈಬಿಡಿ



ರಾಣಿಬೆನ್ನೂರು ನಗರದಲ್ಲಿ ಕರ್ನಾಟಕ ರಾಜ್ಯ ರೈತ ಸಂಘದ ಕಾರ್ಯಕರ್ತರು ಕೃಷಿ ಇಲಾಖೆ ಸಿಬ್ಬಂದಿ ಮೂಲಕ ಸಹಾಯಕ ಕೃಷಿ ನಿರ್ದೇಶಕರಿಗೆ ಮನವಿ ಸಲ್ಲಿಸಿದರು.

• **ಕನ್ನಡಪ್ರಭ ವಾರ್ತೆ** ರಾಣಿಬೆನ್ನೂರು

ಮುಂಗಾರು ಬಿತ್ತನೆಗೆ ಮೊದಲೇ ರಸಗೊಬ್ಬರದ ಕೊರತೆಯಾಗದಂತೆ ಮತ್ತು ಬೀಜಗಳ ಸಂಗ್ರಹದ ಬಗ್ಗೆ ಕ್ರಮ ಕೈಗೊಳ್ಳುವಂತೆ ಆಗ್ರಹಿಸಿ ಕರ್ನಾಟಕ ರಾಜ್ಯ ರೈತ ಸಂಘದ ಕಾರ್ಯಕರ್ತರು ಸೋಮವಾರ ಕೃಷಿ ಇಲಾಖೆ ಸಿಬ್ಬಂದಿ ಮೂಲಕ ಸಹಾಯಕ ಕೃಷಿ ನಿರ್ದೇಶಕರಿಗೆ ಮನವಿ ಸಲ್ಲಿಸಿದರು.

ರೈತ ಮುಖಂಡ ಹನುಮಂತಪ್ಪ ಕಬ್ಬಾರ ಮಾತನಾಡಿ, ಮುಂಗಾರು ಪ್ರಾರಂಭಕ್ಕೂ ಮುನ್ನ ತಾಲೂಕಿನ ರೈತರಿಗೆ ಅಗತ್ಯವಿರುವ ರಸಗೊಬ್ಬರ ಮತ್ತು ಬೀಜಗಳ ದಾಸ್ತಾನು ಮಾಡಿಕೊಳ್ಳಬೇಕು. ಕೇಂದ್ರ ಸರ್ಕಾರ ಎಫ್‌ಐಡಿ ಮಾಡಿದರೆ ಮಾತ್ರ ಗೊಬ್ಬರ ಕೊಡುವುದಾಗಿ ಆದೇಶ ಮಾಡುವ ಮೂಲಕ ರೈತರನ್ನು ದಾರಿ ತಪ್ಪಿಸುವಂತಹ ವ್ಯವಸ್ಥೆ ಮಾಡಿದೆ. ರೈತರಿಗೆ ಇದು ಬರಸಿಡಿಲು ಬಡಿದಂತಾಗಿದೆ. ಈಗಾಗಲೇ ರೈತರು ಮುಂಗಾರು ಬಿತ್ತನೆಗೆ ಭೂಮಿಯನ್ನು ಹದಗೊಳಿಸಿ ಬಿತ್ತನೆಯ ತಯಾರಿಯಲ್ಲಿದ್ದಾರೆ. ಇಂತಹ ಸಂದರ್ಭದಲ್ಲಿ ರೈತರಿಗೆ ಎಫ್‌ಐಡಿ ಮಾಡಿಸಿ ಎಂದು ಅಧಿಕಾರಿಗಳು ಒತ್ತಡ ಹಾಕುತ್ತಿದ್ದಾರೆ. ಒಂದು ಕಡೆಗೆ ಅಧಿಕಾರಿಗಳು ಸರ್ಕಾರದ ಆದೇಶವನ್ನು ಪಾಲನೆ ಮಾಡಲಿಕ್ಕೆ ರೈತರನ್ನು ದಿಕ್ಕು ತಪ್ಪಿಸುವ ಕೆಲಸ ಮಾಡುತ್ತಿದ್ದಾರೆ. ಪ್ರಸಕ್ತ ಸಾಲಿನ ಮುಂಗಾರು ಬಿತ್ತನೆಗೆ ಈ ಆದೇಶ ಕೈಬಿಟ್ಟು ಕೂಡಲೇ ರೈತರಿಗೆ ಬೀಜ ಮತ್ತು ಗೊಬ್ಬರ ಸಮರ್ಪಕವಾಗಿ ದೊರಕುವಂತೆ ಜಿಲ್ಲಾ ಮತ್ತು ತಾಲೂಕ ಆಡಳಿತ ಕ್ರಮ ಕೈಗೊಳ್ಳಬೇಕು. ಈ ನಿಟ್ಟಿನಲ್ಲಿ ಬೀಜ, ಗೊಬ್ಬರ ಅಂಗಡಿಯ ಮಾಲೀಕರನ್ನು, ರೈತರು, ವಿವಿಧ ಸಂಘಟನೆಗಳ ಮುಖಂಡರನ್ನು ಕರೆಯಿಸಿ ಸಭೆಗಳನ್ನು ಮಾಡಿ ಬೇರೆ ಬೇರೆ ಜಿಲ್ಲೆಗೆ ಗೊಬ್ಬರವನ್ನು ಕೊಡುತ್ತಿರುವ ಅಂಗಡಿಕಾರರ ಮೇಲೆ ಸೂಕ್ತ ಕ್ರಮ ಕೈಗೊಳ್ಳಬೇಕು. ಸ್ಥಳೀಯ ರೈತರಿಗೆ ಯಾವುದೇ ರೀತಿಯಲ್ಲಿ ಬೀಜ, ಗೊಬ್ಬರಕ್ಕೆ ತೊಂದರೆ ಆಗದಂತೆ ಹಾಗೂ ಸಮರ್ಪಕವಾಗಿ ವಿತರಿಸುವ ವ್ಯವಸ್ಥೆ ಮಾಡಬೇಕು. ಇಲ್ಲವಾದಲ್ಲಿ ಮುಂದಿನ ದಿನಗಳಲ್ಲಿ ದೊಡ್ಡಮಟ್ಟದ ಪ್ರತಿಭಟನೆ ಮಾಡಬೇಕಾಗುತ್ತದೆ ಎಂದು ಎಚ್ಚರಿಸಿದರು.

ಈರಣ್ಣ ಬುಡುಪನಹಳ್ಳಿ, ಮಲ್ಲಿಕಾರ್ಜುನ ತೆಗ್ಗಿನ, ಬಸವರಾಜ ನೆಲೊಗಲ್, ಸೋಮನಗೌಡ ಪಾಟೀಲ, ಫಕ್ಕಿರೇಶ ಮಾಚೇನಹಳ್ಳಿ, ಬಸವರಾಜ ಹಾದಿಮನಿ, ಫಕ್ಕಿರೇಶ ರಂಗರೆಡ್ಡಿ, ಸಂಪತ್ ನಾಗರಹಳ್ಳಿ, ಸಿದ್ದಪ್ಪ ಪೂಜಾರ, ಶೇಖಪ್ಪ ಕೊಪ್ಪದ, ಸೋಮರೆಡ್ಡಿ ಹಾದಿಮನಿ, ಬಸವರಾಜ ಮೇಗಳಗೇರಿ ಮತ್ತಿತರರಿದ್ದರು.

ಪಂಚ ರಾಜ್ಯ ಚುನಾವಣೆಯ ಫಲಿತಾಂಶ: ಬಿಜೆಪಿ ವಿಜಯೋತ್ಸವ



ರಾಣಿಬೆನ್ನೂರು ನಗರದ ಬಿಜೆಪಿ ಕಚೇರಿ ಮುಂಭಾಗದಲ್ಲಿ ಬಿಜೆಪಿ ಕಾರ್ಯಕರ್ತರು ಪಂಚ ರಾಜ್ಯಗಳ ಚುನಾವಣೆಗಳಲ್ಲಿ ಉತ್ತಮ ಫಲಿತಾಂಶ ಗಳಿಸಿದ ಪ್ರಯುಕ್ತ ವಿಜಯೋತ್ಸವ ಆಚರಿಸಿದರು.

• **ಕನ್ನಡಪ್ರಭ ವಾರ್ತೆ** ರಾಣಿಬೆನ್ನೂರು

ಪಂಚ ರಾಜ್ಯಗಳ ಚುನಾವಣೆ ಪೈಕಿ ಪಶ್ಚಿಮ ಬಂಗಾಲ, ಅಸ್ಸಾಂ, ಪುದುಚೇರಿ ರಾಜ್ಯಗಳಲ್ಲಿ ಬಿಜೆಪಿ ನೇತೃತ್ವದ ಎನ್‌ಡಿಎ ವಿಜಯ ಸಾಧಿಸಿದ ಪ್ರಯುಕ್ತ ಭಾರತೀಯ ಜನತಾ ಪಕ್ಷದ ಕಾರ್ಯಕರ್ತರು ಸೋಮವಾರ ಸಂಜೆ ನಗರದ ಸ್ಟೇಷನ್ ರಸ್ತೆ ಪಕ್ಷದ ಕಚೇರಿಯ ಮುಂಭಾಗದಲ್ಲಿ ಪಟಾಕಿ ಸಿಡಿಸಿ ವಿಜಯೋತ್ಸವ ಆಚರಿಸಿದರು.

ಮಾಜಿ ಶಾಸಕ ಅರುಣಕುಮಾರ ಪೂಜಾರ, ಶಹರ ಘಟಕದ ಅಧ್ಯಕ್ಷ ಮಂಜುನಾಥ ಕಾಟಿ, ಚೋಳಪ್ಪ ಕಸವಾಳ, ಎ.ಬಿ.ಪಾಟೀಲ, ಮಂಜುನಾಥ ಓಲೇಕಾರ, ಚನ್ನಮ್ಮ ಗುರುಪಾದೇವರಮಠ, ಪವನಕುಮಾರ ಮಲ್ಲಾಡದ, ಮೈಲಪ್ಪ ಗೋಣಿಬಸಮ್ಮನವರ, ಅಮೋಘ ಬದಾಮಿ, ರಮೇಶ ಕರಡೆಣ್ಣನವರ, ಮೃತ್ಯುಂಜಯ ಪಾಟೀಲ, ಲಲಿತಾ ನಿಡಗುಂದಿ, ಬಸವರಾಜ ರೊಡ್ಡನವರ, ಮೌನೇಶ ತಳವಾರ ಮತ್ತಿತರರಿದ್ದರು.

ಅಭಿನಂದನೆ... 4 ವಿದ್ಯಾರ್ಥಿಗಳು ಎನ್‌ಎಂಎಂಎಸ್ ಸ್ಕಾಲರ್‌ಶಿಪ್‌ಗೆ ಆಯ್ಕೆ

ಹಾನಗಲ್ ಎನ್‌ಸಿಜೆಸಿ ಪ್ರೌಢಶಾಲೆ ಶೇ.100 ಸಾಧನೆ

• **ಕನ್ನಡಪ್ರಭ ವಾರ್ತೆ** ಹಾನಗಲ್ಲ


ಹಾನಗಲ್ಲಿನ ನ್ಯೂ ಸಂಯುಕ್ತ ಪದವಿ ಪೂರ್ವ ಮಹಾವಿದ್ಯಾಲಯದ ಎ ಗ್ರೇಡ್ ಪಡೆದ ಪ್ರೌಢಶಾಲೆಯ ಎಸ್‌ಎಸ್‌ಎಲ್‌ಸಿ ಫಲಿತಾಂಶ ಮೊಟ್ಟ ಮೊದಲ ಬಾರಿಗೆ ಶೇ. 100 ಆಗಿದ್ದು, ರೋಹಿಣಿ ಭಾವಿಕಟ್ಟಿ ಶೇ.94 ಅಂಕ ಪಡೆದು ಶಾಲೆಗೆ ಹಾಗೂ ಪಟ್ಟಣಕ್ಕೆ ಕನ್ನಡ ಮಾಧ್ಯಮದಲ್ಲಿ ಪ್ರಥಮ ಸ್ಥಾನ ಪಡೆದಿದ್ದಾಳೆ ಎಂದು ಮುಖ್ಯೋಪಾಧ್ಯಾಯ ಸುರೇಶ ದಾಸರ ತಿಳಿಸಿದ್ದಾರೆ.

ಹಾನಗಲ್ಲಿನ ಜನತಾ ಶಿಕ್ಷಣ ಸೌಹಾರ್ದ ಸಹಕಾರಿಸಂಘದಪ್ರತಿಷ್ಠಿತಪ್ರೌಢಶಾಲೆಯಾದ ನ್ಯೂ ಸಂಯುಕ್ತ ಪದವಿ ಪೂರ್ವ ಮಹಾವಿದ್ಯಾಲಯದ ಈ ಪ್ರೌಢಶಾಲೆಯ 88 ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದರು. ಎಲ್ಲ ವಿದ್ಯಾರ್ಥಿಗಳು ಉತ್ತೀರ್ಣರಾಗುವ ಮೂಲಕ ಶೇ.100 ಫಲಿತಾಂಶ ಶಾಲೆಗೆ ಬಂದಿದೆ. 5 ವಿದ್ಯಾರ್ಥಿಗಳು ಉನ್ನತ ದರ್ಜೆ, 52 ವಿದ್ಯಾರ್ಥಿಗಳು ಪ್ರಥಮ ದರ್ಜೆ, 24 ವಿದ್ಯಾರ್ಥಿಗಳು ದ್ವಿತೀಯ ದರ್ಜೆಯಲ್ಲಿ ಉತ್ತೀರ್ಣರಾಗಿದ್ದಾರೆ.

ರೋಹಿಣಿ ಭಾವಿಕಟ್ಟಿ ಶೇ.94 ಅಂಕ ಪಡೆದು ಶಾಲೆಗೆ ಹಾಗೂ ಪಟ್ಟಣ ಮಟ್ಟಕ್ಕೆ ಪ್ರಥಮ ಸ್ಥಾನ ಪಡೆದಿದ್ದಾಳೆ. ಶಾಲೆಗೆ ದೀಪಾ ಮುದಕಣ್ಣನವರ ಶೇ.91.36 ಅಂಕ ಪಡೆದು ದ್ವಿತೀಯ, ಮಹೇಶ ಕರಿಭೀಮಕ್ಕನವರ ಶೇ.90 ಅಂಕ ಪಡೆದು ತೃತೀಯ ಸ್ಥಾನ ಪಡೆದಿದ್ದಾರೆ. ರೇಹಾನ ಧಾರವಾಡ (ಶೇ.88), ಪೂಜಾ ಮುಶಣ್ಣನವರ (ಶೇ.86.88), ಹರ್ಷ ಮಡಿವಾಳರ (ಶೇ.83.52), ದಯಾನಂದ ಲಮಾಣಿ (ಶೇ.82.24), ನವೀನ ಶೇತಸನದಿ (ಶೇ.81.60), ರಾಜು ಗಂಜೀಗಟ್ಟಿ (ಶೇ.80.80), ಪವನ ಲಮಾಣಿ (ಶೇ.80) ಅಂಕ ಪಡೆದು ಶಾಲೆಗೆ ಕೀರ್ತಿ ತಂದಿದ್ದಾರೆ.

ಅಲ್ಲದೆ ಈ ವರ್ಷ ಎನ್‌ಎಂಎಂಎಸ್ ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ಇದೇ ಶಾಲೆಯ ಸೌಮ್ಯ ಹುಲಮನಿ, ಶ್ರೀದೇವಿ ದಾಸರ, ಶ್ರೇಯಾ ಅಂಗಡಿ, ಅಣ್ಣಪ್ಪ ಜಾಧವ ಎನ್‌ಎಂಎಂಎಸ್ ವಿದ್ಯಾರ್ಥಿ ವೇತನಕ್ಕೆ ಭಾಜನರಾಗಿದ್ದಾರೆ.

ಮಕ್ಕಳಸಾಧನೆಗೆಸಂಸ್ಥೆಯವಿಶೇಷಾಧಿಕಾರಿ ಪ್ರವೀಣ ಬಾರ್ಕಿ, ಕಾರ್ಯನಿರ್ವಾಹಕ ಅಧಿಕಾರಿ ಎಂ.ಎಚ್. ಬಳಿಗಾರ, ಮುಖ್ಯೋಪಾಧ್ಯಾಯ ಸುರೇಶ ದಾಸರ, ಶಿಕ್ಷಕರಾದ ಆರ್.ವಾಯ್. ನಾಯಕ, ವಿ. ಸಂತೋಷ, ಜಗದೀಶ ಕನವಳ್ಳಿ, ಎಸ್.ಎಂ. ಹಳ್ಳೇರ, ಸಚಿನ್ ನಾಯಕ, ಚೈತ್ರಾ ಮಡಿವಾಳರ, ಮಂಜುನಾಥ ಬಿ.ಎಸ್., ಸಣ್ಣಬಸಮ್ಮ ಮಳೆಯಣ್ಣನವರ, ರಮೇಶ ಮಡಿವಾಳರ, ಮಮತಾ ಮುಗಳಕ್ಕಿ ಸಂತಸ ವ್ಯಕ್ತಪಡಿಸಿದ್ದಾರೆ.



ರೋಹಿಣಿ ಭಾವಿಕಟ್ಟಿ, ದೀಪಾ ಮುದಕಣ್ಣನವರ, ಮಹೇಶ ಕರಿಭೀಮಕ್ಕನವರ, ರೇಹಾನ ಧಾರವಾಡ, ಪೂಜಾ ಮುಶಣ್ಣನವರ, ಹರ್ಷ ಮಡಿವಾಳರ, ದಯಾನಂದ ಲಮಾಣಿ
ನವೀನ ಶೇತಸನದಿ, ರಾಜು ಗಂಜೀಗಟ್ಟಿ, ಪವನ ಲಮಾಣಿ, ಸೌಮ್ಯ ಹುಲಮನಿ, ಶ್ರೀದೇವಿ ದಾಸರ, ಶ್ರೇಯಾ ಅಂಗಡಿ, ಅಣ್ಣಪ್ಪ ಜಾಧವ

ದರ್ತಿ ಮಾತಾ ಬಚಾವ್ರೋ ಅಭಿಯಾನ



• **ಕನ್ನಡಪ್ರಭ ವಾರ್ತೆ** ಹಾವೇರಿ

ತಾಲೂಕಿನ ಕೋಳೂರ ಗ್ರಾಮದ ಕೃಷಿ ಪತ್ತಿನ ಸಹಕಾರಿ ಸಂಘದ ಕಚೇರಿಯಲ್ಲಿ ಕರಜಗಿ ರೈತ ಸಂಪರ್ಕ ಕೇಂದ್ರದ ವತಿಯಿಂದ ದರ್ತಿ ಮಾತಾ ಬಚಾವ್ರೋ ಕಾರ್ಯಕ್ರಮ ಆಯೋಜಿಸಲಾಗಿತ್ತು.

ಈ ವೇಳೆ ಸಹಾಯಕ ಕೃಷಿ ನಿರ್ದೇಶಕ ವೀರಭದ್ರಪ್ಪ ಬಿ.ಎಚ್. ಮಾತನಾಡಿ, ರಾಸಾಯನಿಕ ಕೃಷಿಯಿಂದಾಗುವ ಹಾನಿ ಹಾಗೂ ಸಾವಯವ ಕೃಷಿಯಿಂದಾಗುವ ಲಾಭದ ಕುರಿತು ವಿವರಿಸಿ ನ್ಯಾನೋ ರಸಗೊಬ್ಬರದ ಉಪಯೋಗದ ಮಹತ್ವ ತಿಳಿಸಿದರು.

ಕೆವಿಕೆ ಹನುಮನಮಟ್ಟಿಯ ಮಣ್ಣು ವಿಜ್ಞಾನಿಗಳಾದ ಡಾ.ರಶ್ಮಿ ಅವರು ರಸಗೊಬ್ಬರ ಹಾಗೂ ಸಮಗ್ರ ಪೋಷಕಾಂಶಗಳ ಮತ್ತು ಮಣ್ಣು ನಿರ್ವಹಣೆ ಕುರಿತು ಸವಿಸ್ತಾರವಾಗಿ ವಿವರಿಸಿದ ಅವರು ಮಣ್ಣು, ಬೆಳೆ ಹಾಗೂ ಮನುಷ್ಯನಿಗೆ ಕೇವಲ ಒಂದೇ ಒಂದು ವ್ಯತ್ಯಾಸ ಅದೇನೆಂದರೆ ಮನುಷ್ಯ ಮಾತನಾಡುತ್ತಾನೆ. ಮಣ್ಣು, ಬೆಳೆ ಮಾತನಾಡುವುದಿಲ್ಲ ಅದೊಂದೇ ವ್ಯತ್ಯಾಸವೆಂದು ಹೇಳಿ ಮಣ್ಣನ್ನು ಸಂರಕ್ಷಣೆ ಮಾಡುವುದು ನಮ್ಮೆಲ್ಲರ ಕರ್ತವ್ಯವಾಗಿದೆ ಎಂದರು. ಕರ್ಜಗಿ ರೈತ ಸಂಪರ್ಕ ಕೇಂದ್ರದ ಕೃಷಿ ಅಧಿಕಾರಿ ಮೇಘನಾ ಎನ್. ಮಾತನಾಡಿ, ರೈತರು ಮುಂಗಾರು ಮಳೆ ಆರಂಭವಾಗುವ ಮೊದಲೆ ಭೂಮಿ ಸಿದ್ಧತೆ ಮಾಡಿಕೊಂಡು ಸಮಯಕ್ಕೆ ಸರಿಯಾಗಿ ಬೆಳೆಗಳ ನಿರ್ವಹಣೆ ಮಾಡಿ ಹಾಗೂ ಸರ್ಕಾರದ ಎಲ್ಲ ಸೌಲಭ್ಯಗಳನ್ನು ಪಡೆದುಕೊಂಡು ಗುಣಮಟ್ಟದ ಫಸಲು ಪಡೆದು ಆರ್ಥಿಕವಾಗಿ ಸದೃಢರಾಗಬೇಕು ಎಂದರು. ಕೋಳೂರ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘದ ಅಧ್ಯಕ್ಷ ಮಾಂತೇಶ ಅಂಗಡಿ, ಉಪಾಧ್ಯಕ್ಷ ಪುಟ್ಟಪ್ಪ ಕಿತ್ತೂರ, ನಿರ್ದೇಶಕರಾದ ಮಂಜುನಾಥ ಪೂಜಾರ ಸೇರಿದಂತೆ ಗ್ರಾಮಸ್ಥರು ಇದ್ದರು.

IN THE SUPREME COURT OF INDIA EXTRA-ORDINARY APPELLATE JURISDICTION
Petition for Special Leave to Appeal (Civil) No(s) 30025-30028 OF 2024
WITH PRAYER FOR INTERIM RELIEF

HARISH KUMAR (DEAD) BY LRS AND OTHERS ....Petitioner(s)
VERSUS
THE STATE OF KARNATAKA AND OTHERS ....Respondent(s)

To,

1 **SRI.DALI MUNIYAPPA,** AGED ABOUT 65 YEARS, S/O MUNI OBALAPPA, R/A ULLAL VILLAGE, YESHWANTHPURA HOBLI, BENGALURU NORTH TALUK, BENGALURU -560110. KARNATAKA.	**PID: 98100/2026 FOR R[19] IN IN SLP(C) NO. 30025/2024, SLP(C) NO. 30026/ 2024SLP(C) NO.30025-30028/2024 (SEC IV-A)**
2 **SMT.B.V. RATHNAMMA,** AGED ABOUT 60 YEARS, D/O LATE VENKATARAMAIAH, R/A NO.33, 12TH E CROSS, MAGADI ROAD, BENGALURU-560023., KARNATAKA.	**PID: 98101/2026 FOR R[21] IN IN SLP(C) NO. 30025/2024, SLP(C) NO. 30026/ 2024SLP(C) NO.30025-30028/2024 (SEC IV-A)**
3 **SRI.H.CHANDRAKEERTHI,** AGED ABOUT 41 YEARS, S/O LATE HANUMAIAH, R/A ULLAL VILLAGE, YESHWANTHPURA HOBLI, BENGALURU NORTH TALUK, BENGALURU-560110, KARNATAKA	**PID: 98102/2026 FOR R[24] IN IN SLP(C) NO. 30025/2024, SLP(C) NO. 30026/ 2024SLP(C) NO.30025-30028/2024 (SEC IV-A)**
4 **SMT.PARVATHAMMA,** AGED ABOUT 71 YEARS, D/O LATE DASAPPA, RESIDING AT NO.36, ULLALA MAIN ROAD, OPP ULLAL LAKE, BENGALURU-560110, KARNATAKA.	**PID: 98103/2026 FOR R[34] IN IN SLP(C) NO. 30025/2024, SLP© NO. 30026/ 2024SLP(C) NO.30025-30028/2024 (SEC IV-A)**
5 **SRI.NARASIMHA MURTHY,** S/O LATE PUTTAIAH, AGED ABOUT 55 YEARS RESIDING AT NO.36, ULLALA MAIN ROAD, OPP ULLAL LAKE, BENGALURU-560110, KARNATAKA	**PID: 98104/2026 FOR R[35] IN IN SLP(C) NO. 30025/2024, SLP(C) NO. 30026/2024SLP(C) NO.30025-30028/2024 (SEC IV-A)**
6 **SRI.NARASIMHA MURTHY,** SON OF LATE MALLAIAH AGED ABOUT 63 YEARS RESIDING AT NO.36, ULLALA MAIN ROAD, OPP ULLAL LAKE, BENGALURU-560110, KARNATAKA	**PID: 98105/2026 FOR R[36] IN IN SLP(C) NO. 30025/2024SLP(C) NO.30025-30028/2024 (SEC IV-A)**
7 **V.HARISH KUMAR,** S/O LATE M.VENKATARAMAIAH, MAJOR, R/O NO.33, 13TH STREET, AGRAHARA DASARAHALLI, MAGADI ROAD, BANGALORE-560079. KARNATAKA	**PID: 98106/2026 FOR R[60] IN IN SLP(C) NO. 30027/2024SLP(C) NO.30025-30028/2024 (SEC IV-A)**
8 **R.SHOBHA,** D/O Y.RAMAKRISHNA, W/O M.C. KESHAVAMURTHY, AGED ABOUT 37 YEARS, R/A NO.11/1, 1ST MAIN, 1ST CROSS, VALMIKINAGAR, MYSORE ROAD, BANGALORE-560026 KARNATAKA.	**PID: 98107/2026 FOR R[61] IN IN SLP(C) NO. 30027/2024SLP© NO.30025-30028/2024 (SEC IV-A)**
9 **SAROJAMMA,** AGED ABOUT 77 YEARS, W/O LATE K.N SRINIVASA GUPTA. RESIDING AT NO.9, 100 FEET ROAD, BANASHANKARI, 2ND STAGE, 4TH BLOCK, BANGALORE-560083. KARNATAKA.	**PID: 98108/2026 FOR R[66] IN IN SLP(C) NO.30028/2024SLP© NO.30025-30028/2024 (SEC IV-A)**
10 **SRI. M. S MOHAN KUMAR,** ABOUT 60 YEARS, S/O LATE K.N SRINIVASA GUPTA. RESIDING AT NO.9, BANASHANKARI, 2ND STAGE, 100 FEET ROAD, 4TH BLOCK, BANGALORE-560083., KARNATAKA.	**PID: 98109/2026 FOR R[67] IN IN SLP(C) NO. 30028/2024SLP(C) NO.30025-30028/2024 (SEC IV-A)**
11 **SRI.K.S. SURENDRA BABU,** AGED ABOUT 51 YEARS, S/O LATE K.N SRINIVASA GUPTA.RESIDING AT NO.9, 100 FEET ROAD, BANASHANKARI, 2ND STAGE, 4TH BLOCK, BANGALORE-560083. KARNATAKA	**PID: 98110/2026 FOR R[68] IN IN SLP(C) NO. 30028/2024SLP(C) NO.30025-30028/2024 (SEC IV-A)**
12 **SRI.K.S VISHWAKIRAN,** AGED ABOUT 46 YEARS, S/O LATE K.N SRINIVASA GUPTA. RESIDING AT NO.9, 100 FEET ROAD, BANASHANKARI, 2ND STAGE, 4TH BLOCK, BANGALORE-560083., KARNATAKA.	**PID: 98111/2026 FOR R[69] IN IN SLP(C) NO.30028/2024SLP© NO.30025-30028/2024 (SEC IV-A)**
13 **SRI. R. V. SUDHIR,** S/O LATE RAJA VENKATARAMANA SHETTY. RESIDING AT NO.37/55, SURVEYOR ROAD, BASAVANAGUDI, BENGALURU-560004 KARNATAKA.	**PID: 98112/2026 FOR R[72] IN IN SLP(C) NO. 30028/2024SLP© NO.30025-30028/2024 (SEC IV-A)**
14 **RUDRA MURTHY** S/O H. S. SADASHIVAIAH, R/O ILLALU VILLAGE, YESWANTHAPURA HOBLI BENGALURU NORTH TALUK -560056, KARNATAKA.	**PID: 98113/2026 FOR R[77] IN IN SLP(C) NO.30028/2024SLP© NO.30025-30028/2024 (SEC IV-A)**
15 **CHANDRAN** S/O LATE NANJUNDAPPA, R/O ILLALU VILLAGE YESWANTHAPURA HOBLI, BENGALURU NORTH TALUK-560056 KARNATAKA	**PID: 98113/2026 FOR R[77] IN IN SLP(C) NO. 30028/2024SLP(C) NO.30025-30028/2024 (SEC IV-A)**
16 **NARASAPPA** S/O BASAPPA, R/O ILLALU VILLAGE YESWANTHAPURA HOBLI BENGALURU NORTH TALUK - 560056 KARNATAKA	**PID: 98115/2026 FOR R[79] IN IN SLP(C) NO.30028/2024SLP(C) NO.30025-30028/2024 (SEC IV-A)**
17 **GANGARAJU** S/O NAGARAJU, R/O ILLALU VILLAGE YESWANTHAPURA HOBLI BENGALURU NORTH TALUK – 560056. KARNATAKA	**PID: 98116/2026 FOR R[80] IN IN SLP(C) NO. 30028/2024SLP(C) NO.30025-30028/2024 (SEC IV-A)**
18 **MUDDUHAHONNAIAH** S/O JAYANNA, R/O ILLALU VILLAGE YESWANTHAPURA HOBLI BENGALURU NORTH TALUK - 560056 KARNATAKA	**PID: 98117/2026 FOR R[81] IN IN SLP(C) NO.30028/2024SLP(C) NO.30025-30028/2024 (SEC IV-A)**
19 **CHANDRAPPA** S/O LATE RAJAPPA, R/O ILLALU VILLAGE YESWANTHAPURA HOBLI BENGALURU NORTH TALUK – 560056 KARNATAKA	**PID: 98118/2026 FOR R[82] IN IN SLP(C) NO.30028/2024SLP(C) NO.30025-30028/2024 (SEC IV-A)**

WHEREAS the Petition for SPECIAL LEAVE PETITION (CIVIL) to Appeal with application for EXEMPTION FROM FILING O.T., EXEMPTION FROM FILING C/C OF THE IMPUGNED JUDGMENT, CONDONATION OF DELAY IN FILING, DISMISSAL OF APPEAL, INTERVENTION/IMPLEADMENT, EXEMPTION FROM FILING O.T., APPLICATION FOR SUBSTITUTION, EARLY HEARING APPLICATION, PERMISSION TO FILE APPLICATION FOR DIRECTION, EXEMPTION FROM APPOINTMENT OF OFFICIAL TRANSLATOR, PERMISSION TO FILE ADDITIONAL DOCUMENTS/FACTS/ANNEXURES, PERMISSION TO FILE ADDITIONAL DOCUMENTS/FACTS/ANNEXURES, EXEMPTION FROM FILING O.T., PERMISSION TO FILE APPLICATION FOR TO FILE DIRECTION, PERMISSION ADDITIONAL DOCUMENTS/FACTS/ANNEXURES above mentioned (copy enclosed) filed in the Registry by Ms. JAYASREE NARASIMHAN, Advocate on behalf of the Petitioner above named was listed for hearing before this Court on 09th December, 2024 along with the connected matters, when the Court was pleased to inter-alia pass the following order:-
"SPECIAL LEAVE PETITION (CIVIL) DIARY NO.
53577/2024
1. Delay condoned.
2. Issue notice.
3. Till the next date of hearing, the possession of the disputed property shall not be disturbed
WHEREAS, the matter was listed for hearing before this Court on 09th April, 2026 along with the connected matters, when the Court was pleased to pass the following order:-
"1. Mr. Kapil Sibal, learned senior counsel appearing for the State of Karnataka in SLP(C) No. 28248-28258/2024, submits that documents dating back to 1890 have since been traced which would prove the character of the lands in dispute as gomal'. According to him, these documents need to be placed on record since they have a material bearing on the special leave petitions under consideration.
2. Let such additional documents be placed on record by filing an appropriate application within three weeks.
3. Exception to such application may be taken by the petitioners within a week thereafter.
4. We have heard Mr. Debal Banerji, learned senior counsel appearing for K.S. Subbaraju - respondent No.7 in SLP (C) No. 30028/2024 in support of the prayer that the said petition should be dismissed.
5. Considering the submissions made by Mr. Sibal recorded above that the Government has since traced old records to the effect that disputed lands are 'gomal', we are of the considered opinion that the application seeking dismissal of SLP (C) No. 30028/2024 ought to be heard along with the special leave petitions.
6. Re-list the special leave petitions and all connected applications ca 21st May, 2026 at 12:00 noon.
7. Interim order, passed earlier, shall continue till the next date of hearing.
8. The latest office report has been read. Some of the respondents are yet to be served.
9. Fresh steps be taken by the State of Karnataka to effect service through paper publication, within two weeks from date. Notice may be published in one English daily newspaper, viz. Deccan Herald and one Kannada newspaper, viz. Kannada Prabha.
10. Once the paper publications are made, the related documents be filed before the Registry a week prior to the returnable date. Put up an appropriate office report."

NOW, THEREFORE, TAKE NOTICE that the above petition will be posted for hearing before this Court on 21st May, 2026 at 10.30 O' Clock in the forenoon or so soon thereafter as may be convenient to the Court when you may appear before the court either in person or through Counsel and show cause to the Court as to why Special Leave and interim relief as prayed for be not granted and the resultant appeal be not allowed.
You may file your affidavit in opposition to the petition as provided under Rule 14(1) of Order XXI, S.C.R.2013 immediately from the date of receipt of notice or not later than 2 weeks before the date appointed for hearing, whichever be earlier, but shall do so only by setting out the grounds in opposition to the questions of law or grounds set out in the SLPS and may produce such pleadings and documents filed before the Court/Tribunal against whose order the SLP is filed and shall also set out the grounds for not granting interim order or for vacating interim order if already granted..
TAKE FURTHER NOTICE that if you fail to enter appearance as aforesaid, no further notice shall be given to you even after the grant of special leave for hearing of the resultant appeal and the matter above mentioned shall be disposed of in your absence.
Dated: 13th April, 2026
Copy to :-
1 Mr. Anirudh Sanganeria (adv.), **2** Ms. Jayasree Narasimhan (adv.), **3** Mr. Deepak Prakash (adv.) **4** Mr. Lzafeer Ahmad B. F. (adv.), **5** Ms. Patil Rekha Chandra Gouda (adv.), **6** Ms. Smriti Churiwal (adv.), **7** Mr. Javedur Rahman (adv.), **8** Mr. Vishnu Sharma A.s. (adv.)

Sd/-
ASSISTANT REGISTRAR

DIPR/CP/496/Zen/2026-27

ದೇವಸ್ಥಾನಗಳಲ್ಲಿ ನಿತ್ಯ ಪ್ರಾರ್ಥನೆಯಿಂದ ಶಾಂತಿ ಸಾಧ್ಯ

ಶಿಗ್ಗಾಂವಿ: ದೇವಸ್ಥಾನಗಳಲ್ಲಿ ನಿತ್ಯ ಪ್ರಾರ್ಥನೆ, ಪೂಜಾ ಕೈಂಕರ್ಯಗಳು ಮೊಳಗಿದಾಗ ಆ ಗ್ರಾಮ ಶಾಂತಿ, ಸಮೃದ್ಧವಾಗಿರಲು ಸಾಧ್ಯವಿದೆ. ಆ ನಿಟ್ಟಿನಲ್ಲಿ ದೇವಸ್ಥಾನಗಳ ಜೀರ್ಣೋದ್ಧಾರಕ್ಕಾಗಿ ಆರಾಧನಾ ಯೋಜನೆಯಡಿ 3.5 ಕೋಟಿ ರು. ಮೀಸಲಿರಿಸಲಾಗಿದೆ ಎಂದು ಶಾಸಕ ಯಾಸೀರಅಹ್ಮದಖಾನ್ ಪಠಾಣ ಹೇಳಿದರು.

ಪಟ್ಟಣದತಹಸೀಲ್ದಾರ್‌ಕಾರ್ಯಲಯದಸಭಾಭವನದಲ್ಲಿ ಆರಾಧನಾ ಯೋಜನೆಯಡಿ ದೇವಸ್ಥಾನಗಳ ಅಭಿವೃದ್ಧಿಗಾಗಿ ಬಿಡುಗಡೆಯಾದ 235 ಲಕ್ಷ ವಿತರಣಾ ಸಭೆಯಲ್ಲಿ ಅವರು ಮಾತನಾಡಿದರು.

ಶೈಕ್ಷಣಿಕ ಕ್ಷೇತ್ರ, ಪಟ್ಟಾ ವಿತರಣೆಯಲ್ಲಿ ಶಿಗ್ಗಾಂವಿ ತಾಲೂಕು ನಂ.1 ಸ್ಥಾನಕ್ಕೇರಿದೆ. ಈಗಾಗಲೇ 40 ಶಿಬಾರ ಸೇರಿದಂತೆ 70 ದೇವಸ್ಥಾನಗಳಿಗೆ ತಲಾ 5 ಲಕ್ಷ ರು.ಗಳಂತೆ ಬಿಡುಗಡೆಗೊಳಿಸಲಾಗಿದೆ. ದೇವಸ್ಥಾನಗಳ ಕಂಪೌಂಡ್, ಪ್ಲೇ ಓವರ್‌ನಿರ್ಮಾಣಕ್ಕೂ ಕ್ರಮಕೈಗೊಳ್ಳಲಾಗಿದೆ. ತಾಲೂಕಿನ 17 ದೇವಸ್ಥಾನಗಳಿಗೆ ಸುಣ್ಣ, ಬಣ್ಣ, ವಿದ್ಯುತ್ ದೀಪ, ಸ್ವಚ್ಛತೆಗಾಗಿ 1 ಲಕ್ಷದಿಂದ 1.5 ಲಕ್ಷದವರೆಗಿನ ಚೆಕ್ ಅನ್ನು ಈ ದಿನ ವಿತರಿಸಲಾಗುತ್ತಿದೆ ಎಂದರು.

ಹಣ 'ಈಗಾಗಲೇ ಸರ್ಕಾರದ ಸುತ್ತೋಲೆ ಪ್ರಕಾರ ದಾಖಲಾತಿ ಒದಗಿಸಿದವರಿಗೆ ಹಣ ಬಿಡುಗಡೆಗೊಳಿಸಲಾಗಿದೆ. ಮುಂದೆ ದೇವಸ್ಥಾನಗಳ ಅಭಿವೃದ್ಧಿಗಾಗಿ ಪಡೆಯುವವರು ಸೂಕ್ತ ದಾಖಲಾತಿಗಳೊಂದಿಗೆ ಅರ್ಜಿ ಸಲ್ಲಿಸಿದರೆ ಹಣ ಬಿಡುಗಡೆಗೆ ಕ್ರಮಕೈಗೊಳ್ಳಲಾಗುವುದು ಎಂದು ಭರವಸೆ ನೀಡಿದರು.

ಶೈಕ್ಷಣಿಕ ಕ್ಷೇತ್ರದಲ್ಲಿ 7ನೇ ಸ್ಥಾನದಲ್ಲಿದ್ದ ಶಿಗ್ಗಾಂವಿ ತಾಲೂಕನ್ನು ಮೊದಲ ಸ್ಥಾನಕ್ಕೆ ತರಲು ಕ್ಷೇತ್ರ ಶಿಕ್ಷಣಾಧಿಕಾರಿಗಳ ನೇತೃತ್ವದಲ್ಲಿ ಮೇಲಿಂದ ಮೇಲೆ ಸಭೆ ಕರೆದು, ಸಾಕಷ್ಟು ಶ್ರಮದ ಪ್ರತಿಫಲವಾಗಿ ಶಿಗ್ಗಾಂವಿ ತಾಲೂಕು ಪ್ರಥಮ ಸ್ಥಾನ ಪಡೆದರೆ, ಸವಣೂರು ದ್ವಿತೀಯ ಸ್ಥಾನ ಪಡೆದಿದೆ ಎಂದು ಹೇಳಿದರು.

ತಹಸೀಲ್ದಾರ್‌ಯಲ್ಲಪ್ಪ ಗೋಣೆಣ್ಣವರ, ಗುಡ್ಡಪ್ಪ ಜಲದಿ, ವಸಂತ ಬಾಗೂರ, ಸುದೀರ ಲಮಾಣಿ, ಅಣ್ಣಪ್ಪ ಲಮಾಣಿ, ಎಸ್.ಎಫ್. ಮಣಿಕಟ್ಟಿ, ಈಶ್ವರಗೌಡ ಪಾಟೀಲ, ಜೆ.ಎಂ. ಮುಲ್ಲಾ, ಗೌಸಖಾನ್ ಮುನಶಿ, ಚಂದ್ರು ಕೊಡ್ಲಿವಾಡ , ಸೇರಿದಂತೆ ಹಲವಾರು ಮುಖಂಡರುಗಳು ಇದ್ದರು.



ಶಿಗ್ಗಾಂವಿಯಲ್ಲಿ ಆರಾಧನಾ ಯೋಜನೆಯಡಿ ದೇವಸ್ಥಾನಗಳ ಅಭಿವೃದ್ಧಿಗಾಗಿ ಶಾಸಕ ಯಾಸೀರ ಅಹ್ಮದಖಾನ್ ಪಠಾಣ ಚೆಕ್ ವಿತರಿಸಿದರು.